# 50

# ಯೆರೂಸಲೇಮಿಗೆ ಪಯಣ

## ಓದುವ ಮನೆಪಾಠ #20

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

K. ಗಲಿಲಾಯದ ಅಂತಿಮ ಪ್ರಸಂಗ: ಸಹೋದರರ ನಡುವಿನ ಭಿನ್ನಾಭಿಪ್ರಾಯ (ಮತ್ತಾಯ 18:15-35).

L. ಸೇವೆಯು ಯುದಾಯಕ್ಕೆ ವರ್ಗಾಹಿಸಲ್ಪಟ್ಟಿತ್ತು (ನೋಡಿ ಯೋಹಾನ 7:1; ಮತ್ತಾಯ 19:1ಎ).

1. ಆತನ ಸಹೋದರರು ಆತನನ್ನು ಪರ್ಣಶಾಲೆಗಳ ಹಬ್ಬಕ್ಕೆ ಕರೆದರು (ಯೋಹಾನ 7:2-9).
2. ಯೇಸು, ಯೆರೂಸಲೇಮಿಗೆ ಪ್ರತ್ಯೇಕವಾಗಿ ಹೋದನು (ಲೂಕ 9:51-56; ಯೋಹಾನ 7:10).
3. ಮಾರ್ಗ ಮಧ್ಯದಲ್ಲಿ "ಶಿಷ್ಯತ್ವದ" ಬಗ್ಗೆ ಬೋಧಿಸಿದನು (ಲೂಕ 9:57-62; ನೋಡಿ ಮತ್ತಾಯ 8:19-22).

M. ಯೆರೂಸಲೇಮಿನ ಪರ್ಣಶಾಲೆಗಳ ಹಬ್ಬದಂದು.

1. ಹಬ್ಬದ ನಡುವೆ: ದೇವಾಲಯದಲ್ಲಿ ಬೋಧನೆ (ಯೋಹಾನ 7:11-36).
2. ಹಬ್ಬದ ಕಡೆಯ ದಿನದಲ್ಲಿ ಜೀವಕರವಾದ ನೀರಿನ ಕುರಿತ ಬೋಧನೆ (ಯೋಹಾನ 7:37-52).
3. ಹಬ್ಬದ ನಂತರ: ಇತರೆ ಬೋಧನೆಗಳು.
   a. ವ್ಯಭಿಚಾರದಲ್ಲಿ ಸಿಲುಕಿದ ಸ್ತ್ರೀ (ಯೋಹಾನ 7:53-8:11).

## ಪೀಠಿಕೆ

ಸತ್ಯ - ತುಂಬಿದ ಈ ಅಧ್ಯಯನವು ಬದಲಾವಣೆಯು ಪಾಠವಾಗಿದ್ದು, ಶ್ರೇಷ್ಟವಾದ ಗಲಿಲಾಯದ ಸೇವೆಯ ಆರಂಭದಿಂದ ಪಾಲಿಸ್ತೇನಿನ ಎಲ್ಲಾ ಭಾಗಗಳಲ್ಲಿ ಪರಿ ಸಮಾಪ್ತಿಯ ಅಂತ್ಯದವರೆಗೆ ಚಲಿಸುವುದಾಗಿದೆ.[1] ಈ ಪರಿಸಮಾಪ್ತಿಯ ಸೇವೆಯು, ಪರ್ಣಶಾಲೆಯಗಳ ಹಬ್ಬದಿಂದ ಪಸ್ಕಹಬ್ಬದವರೆಗೆ ಸಾಗುತ್ತಾ ಸುಮಾರು ಆರು ತಿಂಗಳಲ್ಲಿ ಅಂತ್ಯವಾಗುತ್ತದೆ.

ಈ ಸೇವೆಯ ಮೂಲ ವಚನವು ಲೂಕ 9:51ರಲ್ಲಿದ್ದು, "ಯೇಸು ತಾನು ಪರಲೋಕವನ್ನೇರುವ[2] ದಿವಸಗಳು ತುಂಬುತ್ತಾ ಬರುವಾಗ ಯೆರೂಸಲೇಮಿಗೆ ಹೋಗುವುದಕ್ಕೆ ಮನಸ್ಸನ್ನು ದೃಢಮಾಡಿಕೊಂಡನು" ಎಂದಿದೆ. ಗ್ರೀಕ್ ವೇದಭಾಗದಲ್ಲಿನ ಇದರ ಅಕ್ಷರಸಹ ಅರ್ಥವು ಆತನ ಪರಲೋಕವನ್ನೇರುವ ದಿನಗಳು ಸಂಪೂರ್ಣವಾಗಲು, "*ಆತನು ಯೆರೂಸಲೇಮಿನತ್ತ ಸಾಗಲು ಮುಖಮಾಡಿದನು*" (ನೋಡಿರಿ KJV; ಒತ್ತಿ ಹೇಳಿದ್ದು ನನ್ನದು). ಯೇಸು ಯೂದಾಯ ಮತ್ತು ಪೆರಿಯಕ್ಕೆ ಪ್ರಯಾಣತ್ತಿರುವುದನ್ನು ನಾವು ನೋಡುತ್ತೇವೆ, ಆದರೆ ಯಾವಾ ಗಲೂ ಆತನ ಯೋಚನೆಯು ಯೆರೂಸಲೇಮಿನಲ್ಲಿಯ[3] ಆತನ ಸನ್ನಿಹಿತವಾದ ಮರಣದ ಬಗೆಗೆ ಕೇಂದ್ರಿಕೃತವಾಗಿತ್ತು. ದುಷ್ಟತನದಿಂದ ಕವಿದ ಮೋಡವು ಆತನನ್ನು ತಡೆಯಲಿಲ್ಲ; ಆತನು ಆ ಕತ್ತಲೆಯ ಮಾರ್ಗದಲ್ಲಿ ದಿಟ್ಟವಾಗಿ ಹೆಜ್ಜೆ ಹಾಕಿದನು. ಒಂದು ಪದಪ್ರಯೋಗವು[4] "ಆತನು

ಒಂದೇ ರೀತಿಯಿಂದ ಯೆರೂಸಲೇಮಿನತ್ತ ಮುಂದೆ ಮುಂದೆ ದೃಢಚಿತ್ತದಿಂದ ಹೊರಟನು" ಎಂದು ಹೇಳುತ್ತದೆ.

## ಶಿಷ್ಯರಿಗಾಗಿ ಕಾಳಜಿ (ಮತ್ತಾಯ 18:15-35)

ಬೋಧನೊಡನೆ ದಕ್ಷಿಣಕ್ಕೆ ನಾವು ಸಾಗುವ ಮೊದಲು ಆತನ ಉತ್ತರ ಸೇವೆಯನ್ನು ಸಂಪೂರ್ಣಗೊಳಿಸುವುದಕ್ಕೆ ಒಂದು ನಿಲುಗಡೆ ಕೊಡೋಣ. ಗಲಿಲಾಯದಲ್ಲಿನ ಆತನ ಅಂತಿಮ ಬೋಧನೆಯು ದೇವರ ರಾಜ್ಯದಲ್ಲಿ ಯಾರು ಶ್ರೇಷ್ಟರು ಎಂಬುದಕ್ಕೆ ಸಂಬಂಧಿಸಿದಂತೆ ನಡೆದ ಬಿಸಿ ಚರ್ಚೆಯಿಂದ ಪ್ರೇರೇಪಿತವಾದದ್ದಾಗಿತ್ತು (ಮತ್ತಾಯ 18:1; ಲೂಕ 9:46). ಯೇಸುವಿನ ಪ್ರತಿಕ್ರಿಯೆಯ ಮೊದಲ ಭಾಗವು ಚಿಕ್ಕಮಗುವಿನಂತೆ ಇರುವುದಾಗಿತ್ತು ಮತ್ತು ಎರಡನೆಯ ಭಾಗವು ಇತರರೊಡನೆ ಹೊಂದಿಕೊಳ್ಳುವುದೇ ಆಗಿತ್ತು. ಹಿಂದಿನ ಪಾಠದಲ್ಲಿ ನಾವು ಮೊದಲ ವಿಷಯವನ್ನು ಅಭ್ಯಾಸಿಸಿದೆವು; ಈಗ ನಾವು ಎರಡನೆಯದನ್ನು ಪರಿಗಣಿಸುವಾ.

### ಅನ್ಯೋನ್ಯತೆಯ ಬಗೆಗೆ ಕಾಳಜಿ (ವಚನಗಳು 15-20)

ಯೇಸು ಈಗಾಗಲೇ ಇತರರ ಬಗೆಗೆ, ಪಾಪ ಮಾಡುವುದರ ಬಗೆಗೆ ಮಾತನಾಡಿದ್ದಾನೆ (ಮತ್ತಾಯ 18:6; ಮಾರ್ಕ 9:42). ಈಗ ಆತನು ಪ್ರಶ್ನೆಯ ಇನ್ನೊಂದು ಬದಿಯನ್ನು ಹೊರಕ್ಕೆ ತರಲು ಸಿದ್ಧನಾದನು: ಆತನ ಕೇಳುಗರು ತಪ್ಪು ಎಸಗಿದ್ದಾದರೆ ಹೇಗೆ? ಅದಕ್ಕೆ ಪೂರಕವಾಗಿ ಮತ್ತಾಯ 18:15ರ ಮೂಲ ವಚನವು: "ನಿನ್ನ ಸಹೋದರನು ತಪ್ಪು ಮಾಡಿದರೆ[5] ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನಿಗೆ ತಿಳಿಸು, ಅವನು ನಿನ್ನ ಮಾತನ್ನು ಕೇಳಿ ದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ."[6]

"ಇಬ್ಬರೇ ಇರುವಾಗ" ಎಂಬುದನ್ನು ಗುರುತು ಹಾಕಿರಿ; ಮೂಲ ವೇದಭಾಗದಲ್ಲಿ "ನಿನ್ನ ಮತ್ತು ಆತನ ಮಧ್ಯ ಏಕಾಂತವಿರುವಾಗ" ಎಂದಿದೆ (ನೋಡಿರಿ KJV). ಕೆಲವರು ಮಾಡುವ ಸಂಗತಿಯು ನಿನಗೆ ನೋವುಂಟು ಮಾಡಿದಾಗ, ಅದನ್ನು ನೀವು ದೊಡ್ಡದು ಮಾಡಬಾರದು ಮತ್ತು ಎಲ್ಲರೆದುರಿಗೆ ತರಬಾರದು; ಬದಲಾಗಿ, ಅದನ್ನು ಕನಿಷ್ಟವೆಂದೆಣಿಸಬೇಕು ಮತ್ತು ಅದನ್ನು ವೈಯಕ್ತಿಕವಾಗಿ ಇರಿಸಿಕೊಳ್ಳಬೇಕು. ಇದನ್ನು Gayle Oler[7] ರವರು ಈ ರೀತಿಯಲ್ಲಿ ಇಡುವವರಾಗಿದ್ದಾರೆ: "ನಿಮ್ಮ ಗಂಡ ಅಥವಾ ಹೆಂಡತಿ, ನಿನ್ನ ಸ್ನೇಹಿತ ಅಥವಾ ಸಂಬಂಧಿ, ಹಿರಿಯರು ಅಥವಾ ಬೋಧಕರ ಅಥವಾ ನಿನ್ನ ನಾಯಿಯನ್ನೂ ಕೂಡಾ ಜರಯಬೇಕಾದರೆ *ಮೊದಲು* ವೈಯಕ್ತಿಕವಾಗಿ ಹೋಗು."

"ಆದರೆ ಅದು ಕಷ್ಟವಾದದ್ದು" ಎಂದು ಇದನ್ನು ನೀನುವಿರೋಧಿಸಬಹುದು! ಹೌಗು, ಇದು ಸರಿ, ಆದರೆ ಇದು ಅವಶ್ಯವಾದದ್ದೂ ಸಹ ಆಗಿದೆ. ಈ ಆಜ್ಞೆಗೆ ವಿಧೇಯತೆಯು ಬಲು ಸಿಡಿಯುವ ಸಂದರ್ಭಗಳನ್ನು ಮುರಿದು ಹಾಕುವುದಾಗಿದೆ. ಇದರ ಬದಲಾಗಿ, ನಾವು ಕ್ರಿಸ್ತನ ಸೂಚನೆಗಳನ್ನು ನಿರ್ಲಕ್ಷಿಸಿದ್ದಾದರೆ ವ್ಯತ್ಯಾಸಗಳನ್ನು ಅಲ್ಲಿಯೇ ಮುಗಿಸಿಕೊಳ್ಳದೆ, ನಮ್ಮ ಅಸಂತೋಷವನ್ನು ಎಲ್ಲರೊಡನೆ ನಾವು ಹಂಚಿಕೊ ಳ್ಳುವುದಾದರೆ ಜನರು ಬಂದಿಲ್ಲ ಇನ್ನೊಂದು ಕಡೆಗೆ ಪಕ್ಷವನ್ನು ವಹಿಸುತ್ತಾರೆ. ಇದು ಸಂಭವಿಸಿದಾಗ, ಕ್ರಿಸ್ತನ ದೇಹಕ್ಕೆ ಬಹು ವಾದ ಬಾಧೆಯನ್ನು ಮಾಡುವುದಾಗಿದೆ.

ನೀನು ನಿನ್ನ ವಿರುದ್ಧ ಪಾಪಮಾಡಿದ ಸಹೋದರನ ಬಳಿ ಒಳ್ಳೆಯ ಮನೋ ಭಾವದಿಂದ ಹೋದದ್ದಾದರೆ (ಗಲಾತ್ಯ 6:1), ನೀನು ಸಹಜವಾಗಿಯೇ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಮಾಡಬಹುದು - ಆದರೆ ಇದು ಯಾವಾಗಲೂ ಅಲ್ಲ. ಇದು ಹೀಗೆ ಇರುವಾಗ, ಮುಂದೆ ಯಾವುದನ್ನು ಮಾಡಬೇಕು ಎನ್ನುವುದಕ್ಕೆ ಯೇಸುವಿನ ಸಲಹೆಯನ್ನು ಪಾಲಿಸು: "ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಇಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು"

(ಮತ್ತಾಯ 18:16). ಇಬ್ಬರು ಅಥವಾ ಮೂವರ ಸಾಕ್ಷಿಯು ಹೊಸ ಮತ್ತು ಹಳೆಯ ಒಡಂಬಡಿಕೆಯೆರಡರಲ್ಲೂ ಒತ್ತಿ ಹೇಳಲ್ಪಟ್ಟಿದೆ (ಧರ್ಮೋಪದೇಶ ಕಾಂಡ 19:15; 2 ಕೊರಿಂಥ 13:1). ಈ ಹಿಂದೆ ಏನು ಸಂಭವಿಸಿತು ಎಂಬ ಒಳನೋಟವನ್ನು ಇದರಲ್ಲಿ ಸೇರಿಸಬಹುದು, ಹೀಗೆ ಅವರು ಹೊಂದಾಣಿಕೆಗೆ[8] ಪೂರಕವಾಗಿ ಇರಬಹುದು ಮತ್ತು ಅವರು ಹಿಂದೆ ಆದ ಸಂಗತಿಗಳಿಗೆ ಸಾಕ್ಷಿಕರಿಸಲು ಸಾಧ್ಯ.

ಮತ್ತೊಬ್ಬರೊಡನೆ ಮಾತನಾಡುವದು, ಬಯಸಿದ ಪರಿಣಾಮವನ್ನು ತರದಿದ್ದರೆ ಹೇಗೆ? "ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು; ಆದರೆ ಸಭೆಯ ಮಾತನ್ನು ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ" (ಮತ್ತಾಯ 18:17) ಎಂದು ಯೇಸು ಹೇಳುತ್ತಾನೆ. ಕ್ರಿಸ್ತನ "ಸಭೆ" ಪದದ ಬಳಕೆಯು ಪ್ರಮುಖವಾದದ್ದುಲ್ಲ.[9] ಎರಡು ಅಧ್ಯಾಯಗಳಿಗಿಂತ ಮುಂಚೆ ಆತನು ಸಭೆಯನ್ನು ಕಟ್ಟುವುದಾಗಿ ವಾಗ್ದಾನ ಮಾಡಿದ್ದನು (ಮತ್ತಾಯ 16:18). ಜನರ ಅನ್ಯೋನ್ಯತೆಯಿಂದ ಕೂಡಿಸಲ್ಪಟ್ಟ ಅಥವಾ ಬೇರ್ಪಡಿಸಲ್ಪಟ್ಟ ದೇವರಿಂದ ಅಧಿಕೃತವಾಗಿ ಕೊಡಲ್ಪಟ್ಟ ಅವರ ದೇಹದಂತೆ ಈಗ ಆತನು ಸಭೆಯನ್ನು ಚಿತ್ರಿಸುತ್ತಿದ್ದಾನೆ.

ನಾವು *ಹೇಗೆ* "ಇದನ್ನು ಸಭೆಗೆ ಹೇಳಬೇಕು" ಎಂದು ಯೇಸು ನಿಖರವಾಗಿ ಹೇಳುತ್ತಿಲ್ಲ. ಕೆಲಸಾರಿ ಇಂಥ ಮಾಹಿತಿಗಳನ್ನು ಸಾರ್ವಜನಿಕ ಆರಾಧನೆಯ ಸಭೆಯ ಆರಾಧನೆಯಲ್ಲಿ ಹಂಚಿಕೊಳ್ಳುವುದಕ್ಕಿಂತ ವಿಶೇಷ ಕೂಟಗಳಲ್ಲಿನ ಸದಸ್ಯರಿಗೆ ಹಂಚಿಕೊಳ್ಳುವುದು ಒಳ್ಳೆಯದು. ಸಭೆಯಲ್ಲಿ ಹಿರಿಯರಿದ್ದರೆ, ಇಂಥ ಸಂಗತಿಗಳೊಡನೆ ಹೇಗೆ ನಿರ್ವಹಿಸಬೇಕು ಎಂಬುದರ ಉತ್ತಮಮಾರ್ಗವನ್ನು ಅವರು ಅರಿತವರಾಗಿರುತ್ತಾರೆ.[10]

ನನಗೆ ಬಲು ಕುತೂಹಲವಾಗಿರುವಂತಹ ಪದವು "ಸಭೆಯ ಮಾತನ್ನು ಕೇಳದೆ ಹೋದರೆ" ಎಂಬುದಾಗಿದೆ. ಸಭೆಗೆ ಬದ್ಧವಾದ ನಿರ್ಧಾರವನ್ನು ಪ್ರತಿವಾದಿಯು ತಿರಸ್ಕರಿಸುವ ಅರ್ಥವನ್ನು ಇದು ಕೊಡಬಹುದಾಗಿದೆ (ನೋಡಿರಿ 1 ಕೊರಿಂಥ 5:12ಬಿ). "ಸಭೆ" ಎಂದು ತೆಗೆದುಕೊಳ್ಳುವದರಲ್ಲಿನ ಅದರ ಮೂಲ ಅರ್ಥವು (ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟವರು) ಮತ್ತು ಅದು "ಆತನು ಕ್ರಿಸ್ತನಲ್ಲಿಯ ಆತನನ್ನು ಪ್ರೀತಿಸುವ ತನ್ನ ಸಹೋದರ ಸಹೋದರಿಯರೆಲ್ಲರ ಮಾತನ್ನು ಕೇಳಲು ನಿರಾಕರಿಸಿದ್ದೇ ಆದರೆ ..." ಎಂದು ವಚನವನ್ನು ಈ ರೀತಿಯಲ್ಲಿ ಅರ್ಥೈಸುವುದಾಗಿದೆ. ಒಬ್ಬ ಸಹೋದರನು ಪಾಪಮಾಡಿದಾಗ, ಸಭೆಯ ಪ್ರತಿಯೊಬ್ಬ ಸದಸ್ಯರೂ ಆತನ ಹತ್ತಿರ ಬಂದು ಕರ್ತನೆಡೆಗೆ ತಿರುಗಿಕೊಳ್ಳಲು ಆತನನ್ನು ಕಣ್ಣೀರಿನಿಂದ ಬೇಡಿಕೊಂಡಿದ್ದಾದರೆ ಹೇಗಿರುತ್ತದೆ? ಹೀಗೆ ಮಾಡಿದ್ದಾದರೆ ಯಾವ ತರದ ಪರಿಣಾಮವು ಉಂಟಾಗುತ್ತದೆ? ಇಂತಹ ನಿವೇದನಗಳನ್ನು ಅಷ್ಟು ಸರಳವಾಗಿ ಪಾಪದಿಂದ ತುಂಬಿದ ತುಚ್ಛೀಕರಿಸಲು ಆಗುವುದಿಲ್ಲ.

ಪಾಪಿಯನ್ನು ಅದು ಹಿಂದಕ್ಕೆ ತರದೆಹೋಗಿದ್ದಾರೂ ಕೂಡಾ ಹೇಗೆ? ಆಗ ಸಭೆಯು ಆತನನ್ನು ಅದರ ಅನ್ಯೋನ್ಯತೆಯಿಂದ ತೆಗೆದು ಹಾಕುವುದಾಗಿದೆ: "ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ" (ಮತ್ತಾಯ 18:17) ಎಂದು ಯೇಸು ಹೇಳುತ್ತಾನೆ.[11] "ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ" ಇದು "ಆತನು ಒಬ್ಬ ಕ್ರೈಸ್ತನಾಗಿರುವುದಿಲ್ಲ" ಎಂಬುದಕ್ಕೆ ರೂಪಕವಾಗಿ ಹೇಳುವುದಾಗಿದೆ. ಇತರ ಪರಿಚ್ಛೇದಗಳ ಆ ಕಾರ್ಯದ ಉದ್ದೇಶವು ಸ್ಪಷ್ಟವಾಗಿದ್ದು ಮೂಲತಹವಾಗಿ ದಂಡನಾತ್ಮಕವಾಗಿರುವುದಿಲ್ಲ, ಆದರೆ ಬದಲಾಗಿ ವ್ಯಕ್ತಿಗೆ ಅದನ್ನು ಆತನ ಅರಿವಿಗೆ ತರುವದು ಮತ್ತು ಕರ್ತನಲ್ಲಿ ಆತನನ್ನು ಪುನತುಂಬಿಸುವದು ಆಗಿದೆ (2 ಥೆಸಲೋನಿಕ 3:14, 15). ಶಿಷ್ಯರು ಅದನ್ನು ಒಳ್ಳೆಯಮನದಿಂದ ತೆಗೆದುಕೊಂಡರು ಹೊರತಾಗಿ ವೈಶಮ್ಯದ ಮತ್ತು ಮತ್ಸರದ ಭಾವನೆಯಿಂದಲ್ಲ, ಆದರೆ ಪ್ರೀತಿ ಮತ್ತು ಕಾಳಜಿಯಿಂದಲೇ (ನೋಡಿರಿ ಇಬ್ರಿಯ 12:6).

ಒಂದು ಮಗುವನ್ನು ಶಿಸ್ತಿಗೆ ಒಳಪಡಿಸುವ ಕಾರ್ಯವು ಎಂದಿಗೂ

ಸಂತೋಷಕರವಾಗಿರುವುದಿಲ್ಲ. ಹಾಗೆಯೇ ಕ್ರಿಸ್ತನಲ್ಲಿಯ ಸಹೋದರ ಅಥವಾ ಸಹೋದರಿಯರು ಶಿಸ್ತಿಗೆ ಒಳಪಡಿಸುವ ಸಂದರ್ಭವು ಸಂತೋಷದ ಸಂದರ್ಭಲ್ಲ. ಯೇಸು ಅದನ್ನು ಬಲ್ಲವನಾಗಿದ್ದಾನೆ; ಆದ್ದರಿಂದ ತನ್ನ ಕೇಳುಗರಿಗ ಪ್ರೋತ್ಸಾಹಿಸುವವನಾಗಿದ್ದಾನೆ, ಸಭೆಯವರು ಈ ಸೂಚನೆಗಳನ್ನು ತೆಗೆದುಕೊಂಡಿದ್ದಾದರೆ ದೇವರು ಅವರೊಡನೆ ಇರುತ್ತಾನೆ ಎಂದು ಆತನು ಆಶ್ವಾಸನೆಯನ್ನು ಕೊಡುವವನಾಗಿದ್ದಾನೆ (ಮತ್ತಾಯ 18:18-20).[12] ವಚನ 20 ಚಿರಪರಿಚಿತ ವಚನವಾಗಿದ್ದು ಅದು "ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ." ಈ ಮನೋಲ್ಲಾಸದ ವಾಗ್ದಾನದ ಬಗೆಗೆ ನಾವು ಸಾಮಾನ್ಯವಾದ ಅನ್ವಯವನ್ನು ಮಾಡಬಹುದು ಮತ್ತು ಮಾಡಿಬಹುದು, ಆದರೆ ಅದನ್ನು ಮನದಲ್ಲಿ ಇಟ್ಟುಕೋ, ಈ ಸಂದರ್ಭದಲ್ಲಿ ಇಬ್ಬರು ಅಥವಾ ಮೂವರು ಒಟ್ಟಾಗಿ ಆತನ ಹೆಸರಿನಲ್ಲಿ ಕೂಡಿಬರುವುರ ಮೂಲಕ ಸಭೆಯ ಶಿಸ್ತನ್ನು ಅಭ್ಯಾಸಿಸುವುದರ ಬಗೆಗೆ ಯೇಸ ಸೂಚಿಸಿದ್ದಾನೆ.

ಸಭೆಗೆ ಮತ್ತಾಯ 18:15-20ರ ಜೊತೆ ಹೆಚ್ಚು ಚಿರಪರಿಚಿತವಾಗುವದು ಅವಶ್ಯವಿದೆ; ನಾವು ಹಲವು ಬಾರಿ ಪಾಪದಲ್ಲಿ ಸಿಲುಕಿ ಶಿಸ್ತಿನ ಸಹೋದರ ಅಥವಾ ಸಹೋದರು ಆಗುವುದಕ್ಕೆ ಅನಿಶ್ಚಿತವುಳ್ಳವರು ಆಗಿರುತ್ತೇವೆ. ಹೇಗೋ, ನಮ್ಮ ಹೃದಯದಲ್ಲಿ ಸಮಾಲೋಚನೆಗಾಗಿ ಉಳಿಸಿಕೊಳ್ಳಬಹುದು ಎಂದು ಪರಿಗಣಿಸಬಹುದಾದ ವಚನದ ಜೊತೆ ನಮ್ಮ ಅಧ್ಯನದ ಈ ಭಾಗವನ್ನು ಮುಗಿಸಲಿದ್ದೇವೆ: "ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು" (ವಚನ 15). ನಾವು ರೀತಿಯಲ್ಲಿ ಮಾಡಿದ್ದಾದರೆ, ಅನೇಕ ಸಮಸ್ಯೆಗಳು ಪರಿಹಾರವಾಗುವವು ಮತ್ತು ಸಭೆಯ ಶಿಸ್ತು ವಿರಳವಾಗಿ ಅವಶ್ಯವಾಗುವದು.

**ಕ್ಷಮೆಯ ಬಗೆಗೆ ಕಾಳಜಿಯಿಂದಿರುವದು (ವಚನಗಳು 21:35)**

ತಪ್ಪು ಮಾಡಿದ ಸಹೋದರನ ಬಳಿಗೆ ಹೋಗುವ ಯೋಸುವಿನ ಬೋಧನೆಯು, ಅಂತಹ ಸಹೋದರನನ್ನು ಎಷ್ಟು ಸಾರಿ ಆತನು ಕ್ಷಮಿಸಬೇಕು ಎಂಬುದುರತ್ತ ಆಶ್ಚರ್ಯಗೊಳ್ಳುವದಕ್ಕೆ ಪ್ರೇರೇಪಿಸಿತು. "ಸ್ವಾಮೀ ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸರಿ ಅವನಿಗೆ ಕ್ಷಮಿಸಬೇಕು" (ವಚನ 21) ಎಂದು ಪೇತ್ರನು ಕೇಳಿದನು.[13] ಆತನು ಬಹುಶ ಉದಾರಿಯಾಗಿರುವುದರ ಬಗೆಗೆ ಯೋಚಿಸುತ್ತಿರಬಹುದು; ರಬ್ಬಿಗಳಿಗೆ ಮೂರು ಸಾರಿ ಹಾಗೆ ಮಾಡುವದು ಅವಶ್ಯವಿತ್ತು. ಆದರೆ ಕ್ರಿಸ್ತನು "ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ" (ವಚನ 22) ಎಂದು ಕ್ರಿಸ್ತನು ಉತ್ತರಿಸಿದಾಗ ಆತನು ಆಶ್ಚರ್ಯಚಕಿತನಾಗಿರಬಹುದು ಎಂಬುದರಲ್ಲಿ ನನಗೆ ಯಾವುದೇ ಸಂಶಯವಿಲ್ಲ. ಇನ್ನೊಂದು ಮಾತಿನಲ್ಲಿ ಕ್ಷಮಾಪಣೆಗೆ ಯಾವುದೇ ಮಿತಿಯು ಇರಬಾರದು.[14]

ನಂತರ ಕರ್ತನು ಅದನ್ನು ದೊಡ್ಡ ಮೊತ್ತದ ಸಾಲದಿಂದ ಕ್ಷಮಿಸಲ್ಪಟ್ಟ ಸೇವಕನು, ತನಗೆ ಅಲ್ಪಹಣಕೊಡಬೇಕಾದ ಸೇವಕನನ್ನು ಕ್ಷಮಿಸಲು ನಿರಾಕರಿಸಿದ "ಕರುಣೆಯುಳ್ಳ ಸೇವಕನ ಸಾಮ್ಯಕ್ಕೆ" ಜೋಡಿಸಿದನು (ವಚನಗಳು 23-35). ಈ ನಿಶ್ಚಿತವಾದ ಅನ್ವಯವು ದೇವರು ನಮ್ಮನ್ನು ಕ್ಷಮಿಸಿದ್ದರಿಂದ, ನಾವು ಕ್ಷಮಿಸುವ ಹಂಗಿನಲ್ಲಿದ್ದೇವೆ ಎಂಬುದಾಗಿದೆ.

ಮತ್ತಾಯ 18:15-35ರಲ್ಲಿನ ಕರ್ತನ ಬೋಧನೆಗಳು ನಮ್ಮ ಸಹೋದರರೊಂದಿಗಿನ ಸಂಬಂಧದಲ್ಲಿ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾರೋಂದಿಗಾದರೂ ತ್ವರಿತವಾಗಿ ಅವಶ್ಯವಿರುವಂಥದ್ದಾಗಿದೆ. ನಾವು ಅನುಸರಿಸುವುದಕ್ಕಾಗಿ ಎರಡು ವಿಷಯಗಳನ್ನು ಆತನು ನಮೂದಿಸಿದ್ದಾನೆ: (1) ನಮಗೆ ಇನ್ನೊಬ್ಬರ ಜೊತೆ ಭಿನ್ನಾಭಿಪ್ರಾಯ ಇರುವುದದರೆ ಇತರರ ಮುಂದೆ ದೂರು ಹೇಳುವ ಬದಲು ಆ ವ್ಯಕ್ತಿಯ ಹತ್ತಿರ ಹೋಗಬೇಕು. (2) ಯಾವುದೇ ರೀತಿಯ ದ್ವೇಷವನ್ನು ಇಟ್ಟುಕೊಳ್ಳಬೇಡ ಬದಲಾಗಿ ಕ್ಷಮಿಸಲು ಸಿದ್ಧರಾಗಿರಿ.

## ಭವಿಷ್ಯಕ್ಕಾಗಿ ಒಪ್ಪಿಸಿಕೊಳ್ಳುವದು

## (ಮತ್ತಾಯ 19:1; ಲೂಕ 9:51-62; ಯೋಹಾನ 7:1-10)

ಮತ್ತಾಯ 19:1, "ಯೇಸು ಈ ಮಾತುಗಳನ್ನು ಮುಗಿಸಿದ ಮೇಲೆ (ಸ್ವಲ್ಪ ಹೊತ್ತಿನ ಮುಂಚೆ ನಾವು ಅಧ್ಯಯನ ಮಾಡಿದಂತೆ) ಗಲಿಲಾಯವನ್ನು ಬಿಟ್ಟು ಯೋರ್ದನ ಹೊಳೆಯ ಆಚೆ ಪ್ರಯಾಣ ಮಾಡಿ ಯೂದಾಯ ಪ್ರಾಂತಕ್ಕೆ ಬಂದನು ..." ಎಂದು ಹೇಳುತ್ತದೆ. ಈ ಸನ್ನಿವೇಷವು ಈಗ ದಕ್ಷಿಣಕ್ಕೆ ಸ್ಥಳಾಂತರವಾಯಿತು.

ನಿಮಗೆ ಹಿಂದಿನದಲ್ಲಿ ನೆನಪಿರುವುದಾಗಿದ್ದಾದರೆ, ಯೇಸು ಹೊಂದಿದ ಯೂದಾಯದ ಸೇವೆಯು ಸ್ನಾನಿಕನಾದ ಯೋಹಾನನು ಸೆರೆಯಲ್ಲಿದ್ದಾಗ ಅಂತ್ಯವಾಯಿತು ಎಂಬುದನ್ನು ನೀವು ನೆನಪಿಸಿಕೊಳ್ಳಿರಿ.[15] ಕ್ರಿಸ್ತನು ಯೂದಾಯದಿಂದ, ಉತ್ತರಕ್ಕೆ ಗಲಿಲಾಯಕ್ಕೆ ಹೊರಟನು. "ಯೆಹೂದ್ಯರು ಆತನನ್ನು ಕೊಲ್ಲುವ ಪ್ರಯತ್ನದಲ್ಲಿದ್ದುದರಿಂದ ಆತನಿಗೆ ಯೂದಾಯದಲ್ಲಿ ಸಂಚಾರಮಾಡುವ ಮನಸ್ಸಿರಲಿಲ್ಲ" ಎಂದು ಯೋಹಾನನು ಹೇಳುತ್ತಾನೆ (ಯೋಹಾನ 7:1).[16] ಈಗ ಹೇಗೋ, ಆತನ ಹಿಂದಿನ ಸೇವೆಗಾಗಿನ ಸನ್ನಿವೇಷಕ್ಕಾಗಿ ಆತನು ಸಾರ್ವತ್ರಿಕವಾಗಿ ಯೂದಾಯಕ್ಕೆ ಮತ್ತು ವಿಶೇಷವಾಗಿ ಯೆರೂಸಲೇಮಿಗೆ ಮರಳಿಹೋಗುವ ಸಮಯವು ಬಂದಿತು.

### ಅಪಹಾಸ್ಯವಿದ್ದಾಗ್ಯೂ ಒಪ್ಪಿಸಿಕೊಳ್ಳುವಿಕೆ (ಯೋಹಾನ 7:2-10)

ಆತನ ಸೇವೆಯ ಈ ಹೊಸ ಅಂಕಣವು ಗುಡಾರಗಳ ಅಥವಾ ಪರ್ಣಶಾಲೆಯ ಹಬ್ಬಕ್ಕಾಗಿನ ಯೆರೂಸಲೇಮಿನ ಪ್ರಯಾಣದಿಂದ ಆರಂಭವಾಗುತ್ತದೆ.[17] ಗುಡರಗಳ ಹಬ್ಬವು ಯೆಹೂದಿಗಳ ಮೂರು ಮುಖ್ಯವಾದ ಹಬ್ಬಗಳಲ್ಲಿ ಒಂದಾಗಿತ್ತು (ಯಾಜಕಕಾಂಡ 23:39-43; ಧರ್ಮೋಪದೇಶಕಾಂಡ 15:12-15);[18] ಇದು ಸೆಪ್ಟೆಂಬರ್ ಅಂತ್ಯದಲ್ಲಿ ಅಥವಾ ಅಕ್ಟೋಬರ್ ತಿಂಗಳಿನ ಮೊದಲಲ್ಲಿ ಆಚರಿಸಲ್ಪಡುತ್ತಿತ್ತು.[19]

ಈ ಹಬ್ಬವು ಸಮೀಪಕ್ಕೆ ಬಂದಿರಲಾಗಿ (ಯೋಹಾನ 7:2) ಆ ಹಬ್ಬಕ್ಕೆ ಹೋಗಬೇಕು ಇದರಿಂದ ಯೂದಾಯದಲ್ಲಿನ ಆತನ ಶಿಷ್ಯರು ಆತನು ಗಲಿಲಾಯದಲ್ಲಿ ಮಾಡಿದಂತಹ ಅದ್ಭುತಕಾರ್ಯಗಳನ್ನು ನೋಡಬಹುದೆಂದು ಯೇಸುವಿನ ತಮ್ಮಂದಿರು[20] ಒತ್ತಾಯಿಸಿದರು (ವಚನಗಳು 3, 4). ವಚನ 5ರ ಪ್ರಕಾರ, ಈ ತಮ್ಮಂದಿರು ಆತನಲ್ಲಿ ನಂಬಿಕೆಯಿಟ್ಟಿರಲಿಲ್ಲ;[21] ಅವರ ಮಾತುಗಳು ಬಹುಶಃ ಕಂಕುನುಡಿಗಳಿಲ್ಲಿ ಅದ್ದಿದಂತಿವೆ. ಅವರು ಯೆಹೂದಿ ನಾಯಕರು: "ಬಲು ಅವಶ್ಯವಾದವರ" ಪಟ್ಟಿಯ ಮೇಲಿರದ್ದರಿಂದ ಯೆರೂಸಲೇಮಿಗೆ ಅವರ ಹೋಗುವಿಕೆಗೆ ಯಾವ ಸಮಸ್ಯೆಯೂ ಇಲ್ಲ, ಆದರೆ ಅಲ್ಲಿದೆ ಹೋಗುವದು ಆತನಿಗೆ ಅಪಾಯಕಾರಿಯಾಗಿತ್ತು. ಕ್ರಿಸ್ತನ ಪ್ರತ್ಯುತ್ತರವು *ಇದನ್ನು* ಸೂಚಿಸುವುದಾಗಿದೆ (ವಚನಗಳು 6-8). ಹೀಗೆ, ಪ್ರಯಾಣಿಕರ ಗುಂಪು ಯೆರೂಸಲೇಮನ್ನು ಬಿಟ್ಟಾಗ, ಆತನು ಹಾಗೂ ಆತನ ಶಿಷ್ಯರು ಇತರರೊಡನೆ ಪ್ರಯಾಣಮಾಡಲಿಲ್ಲ (ವಚನ 9). ನಂತರದಲ್ಲಿ ಹೇಗೋ, ಅವರೂ ಮರೆಯಾಗಿ ಹಬ್ಬಕ್ಕೆ ಹೋದರು (ವಚನ 10).

ಅಂತೂ ಯೇಸು ಜಾತ್ರೆಗೆ ಹೋದದ್ದರಿಂದ, ವಚನ 8ರಲ್ಲಿನ: "ನನ್ನ ಸಮಯವು ಇನ್ನೂ ಒದಗದೆ ಇರುವುದರಿಂದ ನಾನು ಈ ಜಾತ್ರೆಗೆ ಈಗ ಹೋಗುವುದಿಲ್ಲ" ಎಂಬ ಆತನ ಮಾತುಗಳು ಗಲಿಬಿಲಿಮಾಡುವಂತಿವೆ. ತಾನು ಹೋಗುವುದಿಲ್ಲ ಎಂದು ಯೇಸು ಹೇಳಿದನು, ಆದರೆ ನಂತರದಲ್ಲಿ ಆತನು ತನ್ನ ಮನಸ್ಸನ್ನು ಬದಲಾಯಿಸಿದನು ಎಂದು ಕೆಲ ವಿಮರ್ಷಾಕಾರರು ಸೂಚಿಸುವವರಾಗಿದ್ದಾರೆ. ಯೇಸುವಿನ ಗುಣಗಳಲ್ಲಿ[22] ಮತ್ತವನ ವಿಷಯಗಳಲ್ಲಿ ಅಸಂಜಸತೆಯು ಅಂಥ ವಿಮರ್ಶೆಯಲ್ಲಿ ಕಾಣುತ್ತೇವೆ (ಲೂಕ 9:51).

ಯೇಸು ಹೇಳಿದ ಮತ್ತು ಆತನು ಮಾಡಿದ ಸಂಗತಿಗಳ ಮಧ್ಯ ಸ್ಪಷ್ಟವಾದ ವಿರೋಧಾ ಭಾಸವನ್ನು ಪರಿಗಣಿಸಿದ ವಿವಿಧ ವಿವರಣೆಗಳು ಕೊಡಲ್ಪಟ್ಟಿವೆ. ಯೇಸುವಿನ ಅರ್ಥವೇ

ನೆಂದರೆ ಆತನು ಜಾತ್ರೆಗೆ ಹೋಗುವುದಿಲ್ಲ ಎಂದರೆ ಆತನ ತಮ್ಮಂದಿರ ಪ್ರಕಾರ ಅದು ಒಬ್ಬ ಹೊಳೆಯುವ ಬಣ್ಣದ ಅದ್ಭುತ ಕಾರ್ಯದ ಕೆಲಸಗಾರನ *ರೀತಿಯಲ್ಲಿ ಅಲ್ಲ* ಎಂದು ಕೆಲವರು ಸೂಚಿಸುವವ ರಾಗಿದ್ದಾರೆ.[23] ಇತರರು ವಾಕ್ಯದ ಕೊನೆಯ ಭಾಗದ ಮೇಲೆ ಮತ್ತು ಆ ವಾಕ್ಯದ ಅರ್ಥವನ್ನು ನಂಬುವವರೂ ಆಗಿದ್ದಾರೆ ಕೇಂದ್ರೀಕರಿಸುವವರಾಗಿದ್ದಾರೆ "ನಾನು ಈ ಜಾತ್ರೆಗೆ ಈಗ ಹೋಗುವುದಿಲ್ಲ"[24] ಎಂಬುದು ಗುಂಪಿನಲ್ಲಿಯ ಯಾತ್ರಿಕರೊಡನೆ ಎಂದಾಗಿದ್ದು ಅದು ನಂತರದಲ್ಲಿ ಆತನು ಹೋಗಬಹುದು ಎಂದು ವ್ಯಂಗವಾಗಿ ಹೇಳುವುದಾಗಿದೆ. ಬಲು ಸಾಮಾನ್ಯವಾದ ಪದವು "ಇನ್ನೂ" ಎಂಬುದು ವಾಕ್ಯದ, ಅಥವಾ ವೇದಭಾಗದ ಅಥವಾ ಸೂಚಿತವಾದ ಒಂದು ಭಾಗವಾಗಿರುವುದಾಗಿದೆ. ಅನೇಕ ಗ್ರೀಕ್ ಹಸ್ತಪ್ರತಿಗಳು ಯೇಸುವಿನ ಮಾತುಗಳಲ್ಲಿ "ಇನ್ನೂ" ಎಂಬ ಪದವನ್ನು ಸೇರಿಸಿದ್ದಾರೆ. ಹೀಗೆ NIVಯಲ್ಲಿ, "ನಾನು *ಇನ್ನೂ* ಜಾತ್ರೆಗೆ ಹೋಗುತ್ತಿಲ್ಲ, ಯಾಕೆಂದರೆ ನನ್ನ ಸಮಯವು ಇನ್ನೂ ಬಂದಿಲ್ಲ"[25] ಎಂದಿದೆ (ಒತ್ತಿ ಹೇಳಿದ್ದು ನನ್ನದು). Warren Wiersbe ರವರು ಹೀಗೆ ಬರೆಯುತ್ತಾರೆ, "ಯೇಸು ... ಸುಳ್ಳು ಹೇಳುವವನೂ, ಜಾರಿಕೊಳ್ಳುವವನೂ ಆಗಿರಲಿಲ್ಲ; ಬದಲಾಗಿ ಆತನು ವಿವೇಕ ವುಳ್ಳ ಎಚ್ಚರಿಕೆಯನ್ನು ಪ್ರಯೋಗಿಸುವವನಾಗಿದ್ದಾನೆ."[26]

ಕ್ರಿಸ್ತನ ಕುಟುಂಬ ಮತ್ತು ಇತರರು ಹಬ್ಬಕ್ಕೆ ಹೋದ ಮೇಲೆ, ಆತನು ಗಲಿಲಿಯಾದಲ್ಲಿ ಅನೇಕ ದಿನಗಳವರೆಗೆ ಉಳಿದನು. ನಂತರ ಆತನೂ ಮತ್ತು ಆತನ ಶಿಷ್ಯರೂ "ಜನರಿಗೆ ಕಾಣದಂತೆ ಹೋಗದೆ ಮರೆಯಾಗಿ ಹೋದರು" (ವಚನಗಳು 9, 10).

## ತಿರಸ್ಕರಿಸಲ್ಪಟ್ಟರೂ ಒಪ್ಪಿಸಿಕೊಂಡಿರುವದು (ಲೂಕ 9:51-56)

ಲೂಕನು ಯೇಸುವಿನ ಯೆರೂಸಲೇಮಿನ ಪ್ರಯಾಣದ ಬಗೆಗೆ ಹೇಳಿದ್ದಾನೆ. ಕರ್ತನು ತನ್ನ ಹೋಗುವಿಕೆಯನ್ನು ತಡಮಾಡಿದ್ದರಿಂದ ಆತನು ಯುದಾಯಕ್ಕೆ ಯಾವಾಗಲೂ ಬಳಸುತ್ತಿದ್ದ ಯೋರ್ದನ ಹೊಳೆಯ ಪೂರ್ವದ ದಂಡೆಯಲ್ಲಿನ ಮಾರ್ಗವನ್ನು ತೆಗೆದುಕೊಳ್ಳಲಿಲ್ಲ. ಬದಲಾಗಿ ಸಮಾರ್ಯದ ಮೂಲಕ ಬಳಸುದಾರಿಯ, ವೇಗ ದಾಯಕವಾದ, ಕಡಿಮೆ ಪ್ರಯಾಣದ ಮಾರ್ಗವನ್ನು ಹಿಡಿದನು.[27]

ಕರ್ತನು ಗಲಿಲಾಯದ ಮಾರ್ಗದಲ್ಲಿರುವಾಗ ತೆರದ ಮನದವರಾಗಿದ್ದ ಸಮಾರ್ಯದವರು (ಯೋಹಾನ 4:40), ಆತನು ಯೆರೂಸಲೇಮಿಗೆ ಜಾತ್ರೆಗೆಂದು ಹೋಗುತ್ತಿದ್ದಾನೆಂದು ತಿಳಿದು ಆತನನ್ನು ಸೇರಿಸಿಕೊಳ್ಳಲು ನಿರಾಕರಿಸಿದರು (ಲೂಕ 9:53). ಯೆರೂಸಲೇಮಿಗೆ ದೇವಾರಾಧನೆಗೆ ಹೋಗುವದು ಸಮಾರ್ಯದ ಗೆರ್ಜೆಮ್ ಬೆಟ್ಟದಲ್ಲಿ ಆರಾಧನೆ ಮಾಡುವುದನ್ನು ನಿಷೇಧಿಸುವದು ಎಂದು ಅವರು ಬಹುಶಃ ಪರಿಗಣಿಸುವವರಾಗಿರಬಹುದು (ನೋಡಿರಿ ಯೋಹಾನ 4:20).

ಎಲಿಯನು ತನ್ನ ವೈರಿಗಳಿಗೆ ಮಾಡಿದ ಹಾಗೆ (2 ಅರಸು 1:10, 12) ಆಕಾಶದಿಂದ ಬೆಂಕಿ ಬಂದು ಇವರನ್ನು ನಾಶಮಾಡಿಬಿಡಲಿ ಎಂದು ನಾವು ಹೇಳಬಹುದೋ (ಲೂಕ 9:54), ಎಂದು "ಗುಡುಗಿನ ಮರಿಗಳಾದ" ಯಾಕೋಬ ಮತ್ತು ಯೋಹಾನರು (ಮಾರ್ಕ 3:17) ಯೇಸುವನ್ನು ಕೇಳಿದರು.[28] ಯೇಸು ಅವರನ್ನು ಗದರಿಸಿದನು (ಲೂಕ 9:55); ಅವರ ವೈರಿಗಳನ್ನು ನಾಶಮಾಡುವುದನ್ನು ಅವರಿಗೆ ಆತನು ಕಲಿಸಿರಲಿಲ್ಲ, ಆದರೆ ಅವರನ್ನು ಪ್ರೀತಿಸಲು ಮತ್ತು ಅವರಿಗಾಗಿ ಪ್ರಾರ್ಥಿಸಲು ಕಲಿಸಿದ್ದನು (ಮತ್ತಾಯ 5:44, 45).[29] ಅವರು ಒಂದು ಪಟ್ಟಣದಿಂದ ತಿರಸ್ಕೃತರಾದರೆ ಇನ್ನೊಂದು ಪಟ್ಟಣಕ್ಕೆ ಹೋಗಬೇಕೆಂದು ಈ ಹಿಂದೆ ಅವರಿಗೆ ಸೂಚಿಸಿದ್ದನು (ಮತ್ತಾಯ 10:23). ಅದನ್ನೇ ಆತನು ಮಾಡಿದ್ದು (ಲೂಕ 9:56).

## ಬೇಕಿಲ್ಲದಿದ್ದಾಗಲೂ ಒಪ್ಪಿಸಿಕೊಳ್ಳುವಿಕೆ (ಲೂಕ 9:57-62)[30]

ಯೆರೂಸಲೇಮಿನ ದಾರಿಯಲ್ಲಿ, ಕೆಲ ಅರೆ ಮನಸ್ಸಿನ, ಭಾವಿ ಶಿಷ್ಯರನ್ನು ಯೇಸು

ಭೇಟಿಯಾದನು. ಆತನ ಮರಣವು ಸನ್ನಿಹಿತವಾಗಿದೆ ಎಂದು ತಿಳಿದು, ಸುಳ್ಳು ಆಡಂಬರದ ಅಡಿಯಲ್ಲಿ ಅವರನ್ನು ಹಿಂಬಾಲಕರನ್ನಾಗಿ ಮಾಡಿಕೊಳ್ಳಲು ಯೇಸು ಬಯಸಲಿಲ್ಲ. ಕಠಿಣತೆಯು ಮುಂದಿರುವಾಗಲೂ, ನಿಷ್ಠೆಯ ಮತ್ತು ಒಂದು ಉದ್ದೇಶ ಹೊಂದಿರುವುದಾದರೆ ಅವರ ನಂಬಿಕೆಯ ಅಚಲವಾಗಿರುತ್ತದೆ. ಒಂದು ಸಾರಿ ನಿರ್ಧಾರವು ಮಾಡಿದ್ದಾದರೆ, ಅಲ್ಲಿಂದ ಹಿಂತಿರುಗುವಿಕೆಯು ಇರುವುದಿಲ್ಲ.[31]

## ಪ್ರತಿಷ್ಠೆಯ ಜೊತೆ ವಿವಾದ (ಯೋಹಾನ 7:11-8:11)

ಯೇಸು ಗುಡಾರಗಳ ಹಬ್ಬಕ್ಕೆ ಹೋಗಿದ್ದು ಯೋಹಾನನ ಸುವಾರ್ತೆಯಲ್ಲಿ ದಾಖಲಾಗಿದೆ. ಕಥೆಯನ್ನು ಅರ್ಥೈಸಿಕೊಳ್ಳಲು, ಮೂರು ತರದ ಗುಂಪುಗಳು ಸೂಚಿಸಲ್ಪಟ್ಟದ್ದನ್ನು ಅರಿತುಕೊಳ್ಳುವದು ನಿಮಗೆ ಅವಶ್ಯವಿದೆ. (1) ಯೆರೂಸಲೇಮಿನಲ್ಲಿರುವ ಧಾರ್ಮಿಕ ಮುಖಂಡರುಗಳು ಸಾಮಾನ್ಯವಾಗಿ "ಯೆಹೂದ್ಯರು" ಎಂದು ಸೂಚಿಸಲ್ಪಡುತ್ತಿದ್ದರು (ಯೋಹಾನ 7:13, 15, 35).[32] ಈ ಗುಂಪಿನ ನಾಯಕರುಗಳು ಸಭಾಮಂದಿರದ ಮಾರ್ಗದಲ್ಲಿರುವವರನ್ನು ಸೂಚಿಸುವಂತೆ[33] "ಹಿರಿಯ ಯಾಜಕರುಗಳು ಅಥವಾ ಫರಿಸಾಯರು" ಎಂದು ಕರೆಯಲ್ಪಡುತ್ತಿದ್ದರು (7:32; ನೋಡಿರಿ ವಚನಗಳು 45, 47, 48). (2) ಯೆಹೂದಿಗಳು ಯೆರೂಸಲೇಮಿನಲ್ಲಿ ಮನೆ ಮಾಡಿಕೊಂಡವರಾಗಿದ್ದರು (7:25). (3) ಹಬ್ಬಕ್ಕಾಗಿ ಕೂಡಿಬಂದ ಮಿಶ್ರ ಜನಸಮೂಹವನ್ನು "ಜನರ ಗುಂಪು" (ಅಥವಾ ಗುಂಪು) ಮತ್ತು ಜನರು (7:40) ಎಂದು ಕರೆಯಲಾಗುತ್ತದೆ (7:12, 20, 31, 32, 43). ಮತ್ತು ಕೆಲಸಾರಿ ಈ ಸಂಖ್ಯೆಯು ಮೊದಲ ಎರಡು ಗುಂಪಿನ ಪ್ರತಿನಿಧಿಗಳನ್ನೂ ಒಳಗೊಂಡಿರುವುದಾಗಿ ರುತ್ತಿತ್ತು. ಆದರೆ ಇದು ಮುಖ್ಯವಾಗಿ ಇತರ ಸ್ಥಳಗಳಿಂದ ಬಂದ ಯಾತ್ರಿಕರ ಮಿಶ್ರಣವಾಗಿತ್ತು.

### ಹಬ್ಬದ ಆರಂಭ: ಯೇಸುವಿನ ಗುಣದ ಮೇಲೆ ವಿವಾದ (7:11-13)

ಜಾತ್ರೆಯ ಆರಂಭವಾದಾಗ, ಯೇಸು ಚರ್ಚೆಯ ಪ್ರಮುಖ ವಿಷಯವಾಗಿದ್ದನು.[34] ಆತನು ಯೆರೂಸಲೇಮಿನಲ್ಲಿದ್ದು[35] ತಿಂಗಳುಗಳೇ ಆಗಿದ್ದಾಗಿನಿಂದಲೂ ಮತ್ತು ಆತನು ಹಬ್ಬಕ್ಕೆ ಬರುತ್ತಾನೋ ಇಲ್ಲವೋ ಎಂದು ಜನರು ಚರ್ಚೆಮಾಡುತ್ತಿದ್ದರು (ವಚನ 11). ಜಾತ್ರೆಗೆ ಬಂದವರು ತಮ್ಮತಮ್ಮಲ್ಲಿ ಭಯದಿಂದ ಮಾತನಾಡುವ ಮಾತು ಅದಾಗಿತ್ತು (ವಚನ 13; ಯೋಹಾನ 9:22ರೊಡನೆ ಹೋಲಿಸಿರಿ): "ಕೆಲವರು ಆತನು ಒಳ್ಳೆಯವನು ಅಂದರು; ಇನ್ನು ಕೆಲವರು ಅಲ್ಲ ಜನರನ್ನು ತಪ್ಪಾದ ಮಾರ್ಗಕ್ಕೆ ಎಳೆಯುತ್ತಾನೆ ಅಂದರು" (7:12ಬಿ, ಸಿ). ನಂತರದ ಅವಲೋಕನೆಯು ಮಾತನಾಡುವವರು ಅರಿತುಕೊಳ್ಳುವುದಕ್ಕಿಂತ ಹೆಚ್ಚಾಗಿ ಗ್ರಹಿಸಿಕೊಳ್ಳುವುದಾಗಿದೆ. ಇಂದು ಅನೇಕರು ಯೇಸುವನ್ನು ದೈವಿಕವಾದವನು ಎಂದು ಸ್ವೀಕರಿಸುವುದರಲ್ಲಿ ಅಸಮ್ಮತಿಯನ್ನು ಹೊಂದಿರುತ್ತಾರೆ, ಆದರೆ ಅವರು ಇನ್ನೂ ಆತನನ್ನು "ಒಳ್ಳೆಯ ಮನುಷ್ಯ" ಎಂದು ಸೂಚಿಸುವವರಾಗಿರುತ್ತಾರೆ. ಕ್ರಿಸ್ತನು ತಾನು ಪ್ರತಿಪಾದಿಸಿದಂತೆ ದೇವರ ಮಗನು ಆಗದೆ ಇದ್ದಲ್ಲಿ, ಆತನು ಒಳ್ಳೆಯ ಮನುಷ್ಯನಲ್ಲ - ಸುಳ್ಳುಗಾರರು ಒಳ್ಳೆಯ ಮನುಷ್ಯರಲ್ಲ. ಯೇಸು ದೇವರ ಮಗನಲ್ಲ ಎಂದು ಸ್ವೀಕರಿಸುವುದನ್ನು ನಿರಾಕರಿಸುವವರು ಆತನನ್ನು "ಒಳ್ಳೆಯ ಮನುಷ್ಯ" ಎಂದು ಕರೆಯುವ ಮೂಲಕ ಬಾಯಿಮಾತಿನ ಸೇವೆಯನ್ನೂ ಕೊಡಬಾರದು.

### ಹಬ್ಬದ ಮಧ್ಯಕಾಲ: ಯೇಸುವಿನ ಅರ್ಹತೆಯ ಮೇಲೆ ವಿವಾದ (7:14-36)

"ಜಾತ್ರೆಯ ಮಧ್ಯಕಾಲದಲ್ಲಿ" ಬಹುಶ ಮಂಗಳವಾರ, ಜಾತ್ರೆಯ ನಾಲ್ಕನೆಯ ದಿನ[36] ಯೇಸು ಒಮ್ಮಲೇ ಇಲ್ಲಿ ಪ್ರತ್ಯಕ್ಷನಾದನು (ವಚನ 14ಎ). ಆತನು "ದೇವಾಲಕ್ಕೆ[37] ಹೋಗಿ ಬೋಧಿಸುತ್ತಿದ್ದನು" (ವಚನ 14ಬಿ). ಹುಡುಗನಾಗಿದ್ದಾಗ, ಆತನು ಕಲಿಯುವುದಕ್ಕೆ ಹೋಗಿದ್ದನು

(ಲೂಕ 2:46); ಆತನ ಸೇವೆಯ ಆರಂಭದಲ್ಲಿ ಆತನು ದೇವಾಲಯವನ್ನು ಶುದ್ಧಿ ಮಾಡಿದನು (ಯೋಹಾನ 2:13-17); ಈಗ ಬೋಧನೆಗಾಗಿ ಹೋದನು. ದೇವಾಲಯವು ಅಧಿಕಾರಿಗಳ ಬಲವಾದ ಹಿಡಿತದಲ್ಲಿ ಇತ್ತು ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ. ಯೇಸು ತನ್ನ ಭಾವಿವಧಾಕಾರರ ಜೊತೆ ವಾಕ್ಕಿಳಿಯುವಲ್ಲಿ ಹಿಂದೆ ಮುಂದೆ ಮಾಡಲಿಲ್ಲ. ಆತನು ಸಿಂಹದ ಬೋನಿಗೆ ಹೋಗಿ ಸಿಂಹದ ಬಾಯಲ್ಲಿನ ಆಹಾರವನ್ನು ಕಸಿದನು.

ಅನೇಕ ಮುಖಂಡರುಗಳಿಗೆ ಕರ್ತನ ಮಾತನ್ನು ಕೇಳುವ ಅವಕಾಶ ಸಿಕ್ಕಿದ್ದು ಇದು ಮೊದಲ ಸಲವಾಗಿತ್ತು ಮತ್ತು ಆತನ ಬೋಧನೆಯು ಅವರನ್ನು "ಆಶ್ಚರ್ಯಚಕಿತರನ್ನಾಗಿಸಿತು."[38] "ವಿದ್ಯಾಭ್ಯಾಸ ಮಾಡದಿರುವ ಆತನಿಗೆ ಶಾಸ್ತ್ರಗಳು ತಿಳಿದಿರುವದು ಹೇಗೆ" ಎಂದು ಅವರು ಕೇಳಿದರು (ಯೋಹಾನ 7:15). "ವಿದ್ಯಾಭ್ಯಾಸ ಮಾಡದಿರುವವನಿಂದ" ಅಂದರೆ ಆತನು ರಬ್ಬಿ ಆಗಲು ಬೇಕಾದ ಸಾಂಪ್ರದಾಯಿಕ ತರಬೇತಿಯನ್ನು ಆತನು ಪಡೆದಿಲ್ಲ ಎಂಬ ವಾದ ಅವರದ್ದಾಗಿತ್ತು. ಇಂದು ಜನರು "ಆತನು ಯುವರ್ಸಿಟಿಯಿಂದ ಯಾವುದೇ ಪದವಿಯನ್ನೂ ಕೂಡಾ ಪಡೆದಿಲ್ಲ" ಎಂದು ಹೇಳ ಬಹುದು! ಇದಕ್ಕೆ ಪ್ರತಿಯಾಗಿ ಯೇಸು. ಆತನಿಗೆ ಮನುಷ್ಯರಿಂದ "ಅರ್ಹನೆನಿಸಿಕೊಳ್ಳುವದು" ಮತ್ತು "ಅಧಿಕೃತವಾದವನು" ಎನ್ನಿಸಿಕೊಳ್ಳುವುದು ಬೇಕಾಗಿಲ್ಲ, ಆದರೆ ತನ್ನನ್ನು ಕಳುಹಿಸಿಕೊಟ್ಟಾತನಿಂದ ಪಡೆಯಬೇಕಾಗಿದೆ ಎಂದು (ವಚನಗಳು 16, 18, 28, 29) ಮತ್ತು ದೇವರು ಆತನಿಗೆ ಹೇಳಿದ್ದನ್ನೇ ಬೋಧಿಸುತ್ತಿರುವುದಾಗಿ ಉತ್ತರಿಸಿದನು.

"ಆತನ [ದೇವರ] ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು [ಅದು, ಆತನು ಮಾಡುತ್ತಿರುವ ಬೋಧನೆಯಾಗಿದೆ] ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು" ಎಂದು ಆತನು ಹೇಳಿದನು (ವಚನ 17). ಏನನ್ನಾದರೂ ಅರ್ಥೈಸಿಕೊಳ್ಳಲು ಯೋಗ್ಯವಾದ ಮನಸ್ಸು ಮಹತ್ವವಾದದ್ದಾಗಿದೆ,[39] ಆದರೆ ದೇವರ ವಾಕ್ಯವನ್ನು ಅರಿತುಕೊಳ್ಳಲು ಇದು ನಿಶ್ಚಿತವಾಗಿಯೂ ಅವಶ್ಯವಾಗಿದೆ. ಕ್ರಿಸ್ತನ ಬೋಧನೆಗಳು ಧಾರ್ಮಿಕ ನಾಯಕರುಗಳಿಗೆ ಒಗಟಾಗಿಯೇ ಉಳಿಯಿತು, ಯಾಕೆಂದರೆ, ದೇವರ ಚಿತ್ತವನ್ನು ಅವರು ಪ್ರತಿಪಾದಿಸುವವರಾಗಿದ್ದರೂ ಕೂಡಾ ನಿಜವಾಗಿಯೂ ಅದನ್ನು ಅವರಿಗೆ ಮಾಡಲಾಗಲಿಲ್ಲ.

ಅಧಿಕಾರಿಗಳು ದೇವರಿಗೆ ವಿಧೇಯರಾಗಿಲ್ಲವೆಂದು ಪುರಾವೆಯನ್ನು ಕೊಡುವದರಿಂದ, ಯೇಸು ಅವರು ಆರನೇಯ ಆಜ್ಞೆಯನ್ನು ಮುರಿಯುವ ಯೋಜನೆಯಲ್ಲಿ ಇದ್ದಾರೆ ಎಂದು ಎತ್ತಿ ತೋರಿಸಿದನು (ವಿಮೋಚನಕಾಂಡ 20:13). "ಮೋಶೆಯು ಧರ್ಮಶಾಸ್ತ್ರವನ್ನು ಕೊಟ್ಟಿದ್ದರೂ ನಿಮ್ಮಲ್ಲಿ ಒಬ್ಬನಾದರೂ ಧರ್ಮಶಾಸ್ತ್ರದಂತೆ ನಡೆಯುವುದಿಲ್ಲವಲ್ಲಾ; ಯಾಕೆ ನನ್ನನ್ನು ಕೊಲ್ಲುವಂತೆ ನೋಡುತ್ತೀರಿ?" ಎಂದು ಆತನು ಕೇಳಿದನು (ಯೋಹಾನ 7:19). ಆತನು ಅವರ ಸಂಚನ್ನು ಬಲ್ಲವನಾಗಿದ್ದನು (ಯೋಹಾನ 5:18; 7:1) ಮತ್ತು ಅದನ್ನು ಬಲ್ಲವನಾಗಿದ್ದಾನೆ ಎಂದು ಅವರಿಗೆ ತಿಳಿಯಬೇಕೆಂದು ಆತನು ಬಯಸಿದ್ದನು.

ಊರಹೊರಗಿನ ಗುಂಪಿಗೆ ಈ ಪರಿಸ್ಥಿತಿಯ ಅರಿವಿಲ್ಲದೆ "ನಿನಗೆ ದೆವ್ವಹಿಡಿದದೆ; ಯಾರು ನಿನ್ನನ್ನು ಕೊಲ್ಲುವುದಕ್ಕೆ ನೋಡುತ್ತಾರೆ?" ಎಂದು ಪ್ರತಿಕ್ರಯಿಸಿದರು (ವಚನ 20). ಈ ಮುಂಚೆ ಆತನು ದೆವ್ವದ ಸಹಾಯ ಹೊಂದಿದವನು ಎಂದು ಜರೆಯಲ್ಪಟ್ಟಿದ್ದನು (ಮತ್ತಾಯ 9:32-34; 10:25; 12:24), ಆದರೆ ಇಲ್ಲಿರುವ ಪದಗಳ ಅರ್ಥವು "ನೀನು ಹುಚ್ಚನಾಗಿದ್ದಿ" ಎಂದು ಸೂಚಿಸುವವುಗಳು ಆಗಿವೆ! (ನೋಡಿರಿ ಯೋಹಾನ 10:20).

ಯೆರೂಸಲೇಮಿನ ಹಿಂದಿನ ಪ್ರಯಾಣವು "ಯೆಹೂದ್ಯರೆಲ್ಲರೂ ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರಯತ್ನಮಾಡುವ" (ಯೋಹನ 5:18) ಪರಿಣಾಮವು ಯೇಸು ನಿಜವಾಗಿಯೂ ಮರಣಕ್ಕೆ ಗುರಿತಿಸಲ್ಪಟ್ಟವನಾಗಿದ್ದಾನೆ ಎಂಬುದು ಮನದಲ್ಲಿ ಬರಲು ಸಹಾಯ ಮಾಡುವುದಾಗಿದೆ. ಆ ಸಂದರ್ಭದಲ್ಲಿ, ಯೇಸು ಸಬ್ಬತ್ ದಿನದಲ್ಲಿ ಒಬ್ಬನನ್ನು ವಾಸಿಮಾಡಿದನು (ಯೋಹಾನ 5:1-9) ಮತ್ತು ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳಲು

ಒತ್ತಾಯಿಸಲ್ಪಟ್ಟನು. ಈಗ ಆತನು ಸಬ್ಬತ್ತ ದಿನದಲ್ಲಿ ಮಾಡಿದಂಥ ಸ್ವಸ್ಥತೆಗಾಗಿ ಜೊತೆಯಾದ ವಾದವನ್ನು ಕೊಡುತ್ತಿದ್ದಾನೆ: ಸಬ್ಬತ್ತಿನಲ್ಲಿ ಸುನ್ನತಿಮಾಡಿಸಿಕೊಳ್ಳುವುದನ್ನು ಸರಿ ಎಂದು ಎಲ್ಲರೂ ನಂಬುದನ್ನು ಆತನು ಎತ್ತಿ ತೋರಿಸಿದನು (7:22, 23ಎ).[40] ಇದಕ್ಕಾಗಿ ಆತನು "ಒಬ್ಬನು ಸಬ್ಬತ್ ದಿನದಲ್ಲಿ ಸುನ್ನತಿ ಮಾಡಿಸಿಕೊಳ್ಳುವುದಾದರೆ ನಾನು ಸಬ್ಬತ್ ದಿನದಲ್ಲಿ ಒಬ್ಬ ಮನುಷ್ಯನನ್ನು ಸಂಪೂರ್ಣವಾಗಿ ಸ್ವಸ್ಥಮಾಡಿದ್ದಕ್ಕೆ ನನ್ನ ಮೇಲೆ ಕೋಪಗೊಳ್ಳುತ್ತೀರೋ?" (ವಚನ 23ಬಿ) ಎಂದು ಪ್ರಶ್ನಿಸಿದನು.

ಕರ್ತನು ಬೋಧನೆಯನ್ನು ಮುಂದುವರೆಸುತ್ತಿದ್ದಂತೆ, ಯೆರೂಸಲೇಮಿನಲ್ಲಿ ವಾಸ್ತವಾಗಿದ್ದವರೆಲ್ಲರೂ (ಮತ್ತು ಈ ಹತ್ಯೆಯ ಸಂಚಿನ ಬಗೆಗೆ ತಿಳಿದಂತವರು) ಆತನು ಬಹಿರಂಗವಾಗಿ ದೇವಾಲಯದಲ್ಲಿ ಬೋಧಿಸುವುದನ್ನು ಕಂಡು ದಂಗಾದರು (ವಚನಗಳು 25, 26ಎ). ಅದಲ್ಲದೆ ಆತನು ಕ್ರಿಸ್ತನಾಗಿರಲಿ ಸಾಧ್ಯವೇ ಇಲ್ಲ ಎಂಬ ನಿರ್ಧಾರಕ್ಕೆ ಬಂದರು: "... ಇವನು ಎಲ್ಲಿಯವನೆಂದು ನಾವು ಬಲ್ಲೆವು; ಕ್ರಿಸ್ತನು ಬರುವಾಗ ಅವನು ಎಲ್ಲಿಯವನೋ ಎಂದು ಒಬ್ಬರಿಗೂ ತಿಳಿಯುವುದಿಲ್ಲ" ಎಂದು ಮಾತಾಡಿಕೊಂಡರು (ವಚನ 27). ಅನೇಕ ಯೆಹೂದಿಗಳು ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಹುಟ್ಟುವನು ಎಂದು ನಂಬುವವರಾಗಿದ್ದರು (ಯೋಹಾನ 7:42; ಮತ್ತಾಯ 2:5, 6). ಮಲಾಕಿ 3:1 ಮತ್ತು ಯೆಶಾಯ 53:8 ರಂತ ಪರಿಚ್ಛೇದಗಳು ಮೆಸ್ಸೀಯನು ರಹಸ್ಯದಲ್ಲಿ ಅಡಗಿದ್ದಾನೆ ಎಂದು ಕಲಿಸುವವು ಆಗಿವೆ ಎಂದು ಕೆಲವರು ನಂಬುತ್ತಾರೆ.

ಈ ಚರ್ಚೆಯ ಕಾಲದ ಆರಂಭದಲ್ಲಿ, ಭಾಗಿದಾರರು ತಮ್ಮ ಮೌಢ್ಯತೆಯನ್ನು ಹೊರಹಾಕಿದಾಗ, ಅವರು ಯೇಸುವಿನ ಜನ್ಮಸ್ಥಳದ ಬಗೆಗೆ ಪರಿಜ್ಞಾನವಿಲ್ಲದವರಿದ್ದರ (ನೋಡಿರಿ ಯೋಹಾನ 7:41). ಇದಕ್ಕೆ ಪ್ರತಿಯಾಗಿ ಆತನ ಇಹಲೋಕದ ಮೂಲವನ್ನು[41] ಅವರು ತಿಳಿದಿರಬಹುದು ಅಥವಾ ತಿಳಿದಿಲ್ಲದೆ ಇರಬಹುದು, ಆದರೆ ಆತನು ನೈಜವಾಗಿ ಪರಲೋಕದಿಂದ ಬಂದಿರುವುದನ್ನು ಅವರು ಅರಿತುಕೊಳ್ಳದಿರುವುದೇ ಆಗಿದೆ ಎಂದು ಕ್ರಿಸ್ತನು ಉತ್ತರಿಸಿನು (ವಚನಗಳು 28, 29).

ಯೇಸು ಆತನನ್ನು ನಂಬಿದ ಜನಜಂಗುಳಿಯ ಅನೇಕರ ಮೇಲೆ ಪ್ರಭಾವಬೀರಿದನು (ವಚನ 31). ಅವರದು ನಾಜೂಕಾದ ನಂಬಿಕೆ ಆಗಿದ್ದದು ಖಚಿತವಾದದ್ದಾಗಿತ್ತು; ಆದರೆ ಇದು ಆತನನ್ನು ಹಿಡಿಯಲು ದೇವಾಲಯಕ್ಕೆ ಸಿಪಾಯಿಗಳನ್ನು ಕಳುಹಿಸಿದ ಮಹಾಯಾಜಕರನ್ನೂ ಮತ್ತು ಫರಿಸಾಯರನ್ನೂ ಸಿಟ್ಟಿಗೆಬ್ಬಿಸುವುದಕ್ಕೆ ಸಾಕಾದದ್ದೂ ಆಗಿತ್ತು (ವಚನ 32). ನಿರಾಳನಾದ, ಕ್ರಿಸ್ತನು ಬೋಧಿಸುವುದನ್ನು ಮುಂದುವರೆಸಿದನು: "ಇನ್ನು ಸ್ವಲ್ಪಕಾಲ ನಾನು ನಿಮ್ಮಲ್ಲಿ ಇದ್ದು ಆ ಮೇಲೆ ನನ್ನನ್ನು ಕಳುಹಿಸಿದಾತನ ಬಳಿಗೆ ಹೊರಟು ಹೋಗುತ್ತೇನೆ; ನೀವು ಹುಡುಕುವಿರಿ ಆದರೆ ನನ್ನನ್ನು ಕಂಡುಕೊಳ್ಳದೆ ಹೋಗುವಿರಿ" (ವಚನಗಳು 33, 34). ನಾವು ಈ ಬದಿಯ ದಡದಲ್ಲಿ ಇರುವುದಾದರೆ, ಆತನ ಮಾತುಗಳನ್ನು ನಾವು ಅರ್ಥೈಸಿಕೊಳ್ಳುವೆವು. "ಇನ್ನು ಸ್ವಲ್ಪಕಾಲ ನಾನು ನಿಮ್ಮಲ್ಲಿ ಇದ್ದು"; ಎಂಬುದು ಆತನ ಮರಣಕ್ಕೆ ಕೇವಲ ಆರು ತಿಂಗಳು ಉಳಿದಿದೆ ಎಂಬರ್ಥ ಕೊಡುತ್ತದೆ. "ಆ ಮೇಲೆ ನನ್ನನ್ನು ಕಳುಹಿಸಿದಾತನ ಬಳಿಗೆ ಹೊರಟು ಹೋಗುತ್ತೇನೆ" ಅಂದರೆ ಆತನು ದೇವರ ಬಳಿಗೆ ಏರಿಹೋಗುವವನಿದ್ದನು. "ನೀವು ಹುಡುಕುವಿರಿ ಆದರೆ ನನ್ನನ್ನು ಕಂಡುಕೊಳ್ಳದೆ ಹೋಗುವಿರಿ." ಇವು ಅವಕಾಶದಿಂದ ತಪ್ಪಿಸಿಕೊಂಡ ಮಾತುಗಳು (ನೋಡಿ ಹೋಶೆಯ 5:6), ಅವಿಶ್ವಾಸದ ಪರಿಣಾಮವಾದ ದುರಂತವೂ ಆಗಿವೆ. ಮರುದಿನ, ಯೇಸು "ನಾನು ಹೋಗಲಿದ್ದೇನೆ, ಮತ್ತು ನೀವು ನನ್ನನ್ನು ಹುಡುಕುತ್ತೀರಿ, ಮತ್ತು ನಿಮ್ಮ ಪಾಪದಲ್ಲಿ ಸಾಯುವವರಾಗಿರುತ್ತೀರಿ; ನಾನು ಎಲ್ಲಿಹೋಗುತ್ತೇನೋ ಅಲ್ಲಿಗೆ ನೀವು ಬರಲಾರಿರಿ" ಎಂದು ಹೇಳಬಹುದಿತ್ತು; "... ನಾನೇ ಅವನೆಂದು [ಮೆಸ್ಸೀಯನು] ನೀವು ನಂಬದ ಹೊರತು, ನೀವು ನಿಮ್ಮ ಪಾಪಗಳಲ್ಲಿ ಸಾಯುವಿರಿ" (ಯೋಹಾನ 8:21, 24) ಎಂದು ಹೇಳಬಹುದಿತ್ತು.

ಯೇಸು ಏನನ್ನು ಹೇಳಬಯಸುತ್ತಿದ್ದಾನೆಂದು ನಾನು ಅರ್ಥಮಾಡಿಕೊಳ್ಳಬಹುದು, ಆದರೆ ಯೆಹೂದಿ ನಾಯಕರು ದಂಗಾದರು. ಆತನು ಪಾಲೆಸ್ತೇನನ್ನು ಬಿಟ್ಟುಹೋಗುವುದರ ಮತ್ತು ಯೆಹೂದ್ಯರಲ್ಲದವರಿಗೆ ಬೋಧಿಸುವುದರ ಬಗೆಗೆ ಮಾತನಾಡುತ್ತಿದ್ದಾನೋ ಎಂದು ಅವರು ಅಚ್ಚರಿಗೊಂಡರು (7:35, 36).[42]

**ಹಬ್ಬ ಅಂತ್ಯ: ಯೇಸು ಪ್ರತಿಪಾದಿಸಿದ್ದರ ವಿರುದ್ಧ ವಿವಾದ (ಯೋಹಾನ 7:37-52)**

"ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ" ಈ ಸ್ಥಳದಲ್ಲಿ ಇನ್ನೊಂದು ದಾಖಲಿತ ಘಟನೆಯು ಘಟಿಸಿತು (ವಚನ 37ಎ). ಸಿಲೋಮ ಕೊಳ್ಳದಲ್ಲಿನ ನೀರನ್ನು ಯಾಜಕನು ಬಂಗಾರ ಪಾತ್ರೆಯಲ್ಲಿ ತುಂಬಿ ನೀರನ್ನು ಶುದ್ಧಿಮಾಡುವದು ಮತ್ತು ಆ ನೀರನ್ನು ಹೆಚ್ಚಿನ ಆಚಾರವಿಧಿಗಳಿಂದ ವೇದಿಯ ಅಡಿಯಲ್ಲಿ ಸುರಿಯುವದು ಆಗಿದ್ದುದು ಆ ದಿನದ ಪ್ರಮುಖ ಸಂಗತಿ ಆಗಿತ್ತು. ಆ ಆಚರಣೆಯು ಅರಣ್ಯದಲ್ಲಿ ಅವ ಪಿತೃಗಳಿಗೆ ದೇವರು ನೀರನ್ನು ಕೊಟ್ಟಾಗಿನ ಸಮಯವನ್ನು ಹಿನ್ನೋಡುವುದೇ ಆಗಿತ್ತು (ವಿಮೋಚನಕಾಂಡ 17:5, 6; ಅರಣ್ಯಕಾಂಡ 20:7-11) ಮತ್ತು ಮೆಸ್ಸೀಯನು ಬಂದಾಗ ದೇವರ ಆತ್ಮವು ಆತನ ಮೇಲೆ ಸುರಿಯುವುದನ್ನು ಎದುರು ನೋಡುವುದೂ ಆಗಿತ್ತು (ಯೋವೇಲ 2:28; ನೋಡಿರಿ ಅಪೊಸ್ತಲರ ಕೃತ್ಯಗಳು 2:16, 17).

ಆ ದಿನದಲ್ಲಿ, ಯೇಸು ಎದ್ದು ನಿಂತುಕೊಂಡು "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ನೀರು ಕುಡಿಯಲಿ." "ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ[43] ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ನೀರಿನ ಹೊಳೆಗಳು ಹರಿಯುವವು" ಎಂದು ಕೂಗಿ ಹೇಳಿದನು (ಯೋಹಾನ 7:37ಬಿ, 38). ಬಂಗಾರದ ಪಾತ್ರೆಯು ಈಗ ಬರಿದಾಗಿದೆ, ಆದರೆ ನೀರು ಎಂದಿಗೂ ಬತ್ತಿಹೋಗದಿರಲಿ ಎಂದು ಆತನ ಕೇಳುಗರು ಆಶೀಸುವವರಾಗಿದ್ದಾರೆ.

ಯೋಹಾನನು ಕ್ರಿಸ್ತನ ಮಾತಿನ ಪರಿಣಾಮಕಾರಿಯಾದ ಒಂದು ವಿವರಣೆಯನ್ನು ಕೊಡುತ್ತಾನೆ: "ಯೇಸು ತನ್ನನ್ನು ನಂಬಿದವನು ಹೊಂದಲಿರುವ ಪವಿತ್ರಾತ್ಮನ ವರವನ್ನು ಕುರಿತು ಹೇಳಿದನು. ಆತನು ಇನ್ನೂ ಮಹಿಮೆಯ ಪದವಿಯನ್ನು ಪದವಿಯನ್ನು ಹೊಂದರೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ" (ವಚನ 29).[44] ಪವಿತ್ರಾತ್ಮನ ಬರುವಿಕೆಯ ಆದರು ಯೇಸು ದಿವಾರೋಹಣವಾದ ಮೇಲಿನ ಪಂಚಾಶತ್ತಮ ದಿನದಲ್ಲಿ ಸಿಕ್ಕುವುದಾಗಿದೆ (ಅಪೊಸ್ತಲರ ಕೃತ್ಯಗಳು 1:8; 2:1-4, 16, 17, 38). ಅದೇ ರೀತಿಯಲ್ಲಿ ಹೆಚ್ಚಾಗಿ ಕಲ್ಲೊಳಗಿನ ನೀರು ದೈಹಿಕ ನೀರಡಿಕೆನ್ನು ತೃಪ್ತಿಪಡಿಸಿದ ಹಾಗೆ. ಯೇಸುವಿನ ಮೇಲೆ ನಂಬಿಕೆಯನ್ನು ಇಟ್ಟವರ ಆತ್ಮೀಕ ಹಂಬಲವನ್ನು ದೇವರ ಆತ್ಮವು ಸಂತೃಪ್ತಗೊಳಿಸುವವನಾಗಿದ್ದಾನೆ.

ಯೇಸುವಿನ ಮಾತನ್ನು ಕೇಳಿದವರು ತಮ್ಮ ಪ್ರತಿಕ್ರಿಯೆಯಲ್ಲಿ ವಿಭಾಗವಾಗಿದ್ದಾರೆ (ಯೋಹಾನ 7:43). ಆತನು ಮೋಶೆಯ ಹಾಗೆ ಇದ್ದಾನೆ ಎಂದು ಕೆಲವರು ಯೋಚಿಸುವವರಾಗಿದ್ದಾರೆ (ವಚನ 40; ನೋಡಿರಿ ಧರ್ಮೋಪದೇಶಕಾಂಡ 18:15). ಆತನು ಮೆಸ್ಸೀಯನೇ ಎಂದು ಕೆಲವರು ಯೋಚಿಸುವವರಾಗಿದ್ದರು (ಯೋಹಾನ 7:41ಎ). ಇತರರು ಆತನು ಆಗಿರಲಿಕ್ಕಿಲ್ಲ ಎಂದು ಹೇಳಿದರು ಯಾಕೆಂದರೆ (ಅವರ ಯೋಚನೆಯಂತೆ) ಆತನು ಗಲಿಲಾಯದಿಂದ ಬಂದವನಾಗಿದ್ದನು, ದಾವೀದನ ಊರಾದ ಬೆತ್ಲೆಹೇಮಿನಿಂದ ಅಲ್ಲ (ವಚನಗಳು 41ಬಿ, 42; ನೋಡಿರಿ 2 ಸಮುವೇಲ 7:12-16; ಮೀಕ 5:2-4).

ಯೇಸುವಿನ ಬೋಧನೆಯಿಂದ ಪ್ರಭಾವಿತವಾರಲ್ಲಿ ಕೆಲವರು ಆತನನ್ನು ಸೆರೆಹಿಡಿಲು ಕಳುಹಿದರು (ಯೋಹಾನ 7:32). ಅವರು ತಮ್ಮ ಅಧಿಕಾರಿಗಳ ಹತ್ತಿರ ಖಾಲಿಕೈಯಲ್ಲಿ ತಿರುಗಿ ಹೋದರು. ಆತನನ್ನು ಅವರು ಯಾಕೆ ಬಂಧಿಸಲಿಲ್ಲ ಎಂದು ಕೇಳಿದರು (ವಚನ 45). ಅದಕ್ಕೆ ಅವರು "ಈ ಮನುಷ್ಯನು ಮಾತಾನಾಡಿದ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ" (ವಚನ 46) ಎಂದು ಹೇಳಿದರು.

ಫರಿಸಾಯರು ಕೋಪೋದ್ರಕ್ತರಾದರು (ವಚನ 47). ಯೇಸು ಮೆಸ್ಸೀಯ ಮೆಸ್ಸೀಯನು ಆಗಿರಲು ಸಾಧ್ಯವಿಲ್ಲ ಎಂದು ಅವರು ಪಟ್ಟುಹಿಡಿದರು. (1) ಯಾಕೆಂದರೆ ಅವರಿಗೆ ಆತನಲ್ಲಿ ನಂಬಿಕೆಯು ಇರಲಿಲ್ಲ (ವಚನ 48), (2) ಯಾಕೆಂದರೆ ಯಾರು ಆತನನ್ನು ನಂಬಿದರೋ ಅವರು ಅಜ್ಞಾನಿಗಳು ಆಗಿದ್ದರು[45] (ವಚನ 49), ಮತ್ತು (3) ಪ್ರವಾದಿಯು ಗಲಿಲಾಯದಿಂದ ಎಂದಿಗೂ ಬರುವವನಾಗಿರಲಿಲ್ಲ (ವಚನ 52).[46] ಅವರ ಸಮುದಾಯದಲ್ಲಿ ಒಬ್ಬನಾದ ನಿಕೊದೇಮನೆಂಬವನು (ಯೇಸುವಿನ ಬಳಿಗೆ ರಾತ್ರಿವೇಳೆಯಲ್ಲಿ ಬಂದವನು [ಯೋಹಾನ 3:1, 2]). ಯೋಗ್ಯವಾದ ವಿಚಾರಣೆಯಿಲ್ಲದೆ ಒಬ್ಬ ವ್ಯಕ್ತಿಯನ್ನು ನಿಂದಿಸುವದು ತಪ್ಪು ಎಂದು ತೋರಿಸಿದನು (ಯೋಹಾನ 7:50, 51; ನೋಡಿರಿ ಧರ್ಮೋಪದೇಶಕಾಂಡ 1:16, 17; 19:15-21).[47] ನಿಕೋದೇಮನ ಮಾತಿನ ಪರಿಣಾಮವು ಅವರು ಆತನ ಮೇಲೆ ತಿರುಗಿ ಬೀಳುವಂತೆ ಮಾಡಿತು (ಯೋಹಾನ 7:52).

ಅವರಿಗೆ ಕರ್ತನನ್ನು ಹಿಡಿಯುವುದಕ್ಕೆ ಅಸಾಧ್ಯವಾಯಿತು ಎಂದು (ವಚನಗಳು 30ಎ, 44), ವೇದಭಾಗವು ಸ್ಪಷ್ಟಪಡಿಸುವುದಾಗಿದೆ (ವಚನ 30ಬಿ; ನೋಡಿರಿ 8:20 ಸಹ) ಆತನ ಮರಣದ "ತಾಸು" ಹತ್ತಿರವಾಗಿತ್ತು - ಕೇವಲ ಆರು ತಿಂಗಳು ದೂರದಲ್ಲಿತ್ತು - ಆದರೆ ಇನ್ನೂ ಇಲ್ಲ.[48]

**ಹಬ್ಬದ ನಂತರ: ಯೇಸುವಿನ ಕಾಳಜಿಯ ಮೇಲೆ ವಿವಾದ (ಯೋಹಾನ 7:53-8:11)**

ಯೋಹಾನ 7:53-8:11 ಅದ್ವಿತೀಯವಾದದ್ದು ಆಗಿದೆ. ಈ ಪರಿಚ್ಛೇದವು ಹಳೆಯ ಹಸ್ತಪ್ರತಿಗಳಲ್ಲಿ ಸಿಕ್ಕಿದಿದ್ದಾಗ್ಯೂ ಕೂಡಾ, ಹೊಸ ಒಡಂಬಡಿಕೆಯ ಅನೇಕ ಭಾಷಾಂತರಗಳಲ್ಲಿ ಇದೆ. ಕೆಲವುಗಳಲ್ಲಿ, ಇದು ವೇದಭಾಗದ ಒಂದು ಭಾಗವಾಗಿ ಪರಿಗಣಿಸಲ್ಪಟ್ಟಿದೆ (KJV; NKJV); ಉಳಿದವುಗಳಲ್ಲಿ ಹೆಚ್ಚಾಗಿ, ಇದು ವೇದಭಾಗದಲ್ಲಿ ಒಳಗೊಂಡಿದೆ ಆದರೆ ಒಂದು ರೀತಿಯಲ್ಲಿ ಹೊರಗೆ ಇಡಲ್ಪಟ್ಟಿದೆ (NASB; NIV; RSV). ಈ ವಚನಗಳು ಯೋಹಾನನ ಮೂಲ ಹಸ್ತಪ್ರತಿಯವು ಆಗಿದೆ, ಈ ಘಟನೆಯು ನಿಜವಾಗಿಯು ಸಂಭವಿಸಿದ್ದು ಎಂದು ಪಂಡಿತರು ಒಪ್ಪುವವರಾಗಿದ್ದಾರೆ.

ಜಾತ್ರೆಯ ಕೊನೆಯಲ್ಲಿ, ಅನೇಕರು ಮನೆಗೆ ಹೋದರು (ಯೋಹಾನ 7:53), ಆದರೆ ಯೇಸು ಆ ಸ್ಥಳದಲ್ಲಿಯೇ ವಾಸ್ತವ್ಯಮಾಡಿದನು. ಎಣ್ಣೆಮರಗಳ ಗುಡ್ಡದಲ್ಲಿ ಆ ರಾತ್ರಿಯನ್ನು ಕಳೆದನು (8:1),[49] ಆತನಿಗಿಂತ ಮುಂದಾಗಿ ಸಿದ್ಧತೆಯನ್ನುಮಾಡುವುದಕ್ಕಾಗಿ ಕಳುಹಿಸಲ್ಪಟ್ಟ ಶಿಷ್ಯರಿಂದ ಕಟ್ಟಲ್ಪಡಲಿರುವ ಗುಡಾರಗಳಿಗಾಗಿ ಇರಬಹುದು (ಲೂಕ 9:52). ಮರುದಿನ ಮುಂಜಾನೆ, ಆತನು ದೇವಾಲಕ್ಕೆ ತಿರುಗಿ ಬೋಧನೆಗಾಗಿ ಬಂದನು (ಯೋಹಾನ 8:2, 20). ಯೆರೂಸಲೇಮಿನಲ್ಲಿ ವಾಸಮಾಡುತ್ತಿರುವಂಥವರು ಆತನ ಕೇಳುಗರು ಆಗಿದ್ದರು, ಅದರೊಡನೆ ಇನ್ನೂ ಯೆರೂಸಲೇಮಿನಲ್ಲಿ ಉಳಿದುಕೊಂಡ ಕೆಲ ಪ್ರಯಾಣಿಕರು ಅದರಲ್ಲಿ ಸೇರಿದ್ದರು.

"ವ್ಯಭಿಚಾರದಲ್ಲಿ ಸಿಕ್ಕಿದ ಹೆಂಗಸನ್ನು ತರುವುದವರ ... ಮೂಲಕ" (8:3, 4) ಆತನು ತನ್ನ ವೈರಿಗಳಿಂದ ಅಡ್ಡಿಪಡಿಸಲ್ಪಟ್ಟನು. ಅವರು ಆತನಿಗೆ "ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನೇನು ಹೇಳುತ್ತಿ?" (8:5) ಎಂದು ಪ್ರಶ್ನಿಸಿದರು. ಈ ಕಪಟಿಗಳಿಗೆ ಧರ್ಮಶಾಸ್ತ್ರದ ಬಗೆಗೆ ಯಾವ ಕಾಳಜಿಯು ಇದ್ದದ್ದೇ ಆದರೆ ಈಗ ಅವರು ಉಲ್ಲಂಘನೆಯಲ್ಲಿ ಒಳಗೊಂಡಿದ್ದ ವ್ಯಕ್ತಿಯನ್ನು ಸಹ ಅವರು ತರುತ್ತಿದ್ದರು. ಅದು ಸ್ತ್ರೀ ಮತ್ತು ಪುರುಷ *ಇಬ್ಬರೂ* ಕಲ್ಲೆಸೆದು ಕೊಲ್ಲಲ್ಪಡಬೇಕು ಎಂದು ಧರ್ಮಶಾಸ್ತ್ರವು ಹೇಳುವುದಾಗಿದೆ (ಯಾಜಕಕಾಂಡ 20:10; ಧರ್ಮೋಪದೇಶಕಾಂಡ 22:22). ಅವರು ನ್ಯಾಯದ ಬಗೆಗೆ ಕಾಳಜಿಯುಳ್ಳವರಾಗಿರಲಿಲ್ಲ ಅಥವಾ ದೇವರಿಗೆ ವಿಧೇಯರಾದವರು ಆಗಿರಲಿಲ್ಲ; ಅವರು ಕೇವಲ ಯೇಸುವನ್ನು ಸಿಕ್ಕಿಸುವುದರಲ್ಲಿ ಮಾತ್ರ ಅಭಿರುಚಿಯುಳ್ಳವರಾಗಿದ್ದರು (ಯೋಹಾನ 8:6ಎ).

ಕ್ರಿಸ್ತನು ಅವರಿಗೆ "ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ" ಎಂದನು (8:7). ನಂತರ ಆತನು ಬೊಗ್ಗಿಕೊಂಡು ಮತ್ತು ಮಣ್ಣಿನಲ್ಲಿ[50] ಬರೆಯತೊಡಗಿದನು ಅದು ದೇವಾಲಯದ ನೆಲದ ಕಲ್ಲನ್ನೆಲ್ಲಾ ತುಂಬಿತು (8:8). ಆತನು ನೆಟ್ಟಗೆ ಕೂತುಕೊಂಡಾಗ, ಆಕೆಯ ಮೇಲೆ ತಪ್ಪುಹೊರಿಸುವವರು ಹೊರಟುಹೋಗಿದ್ದರು (8:9, 10).

ಯೇಸು ಆಕೆಗೆ, "ಅಮ್ಮಾ, ನಿನ್ನ ಮೇಲೆ ತಪ್ಪುಹೊರಿಸುವವರು ಎಲ್ಲಿದ್ದಾರೆ? ನಿನಗೆ ಯಾರೂ ಶಿಕ್ಷೆ ವಿಧಿಸಲಿಲ್ಲವೋ?" ಎಂದು ಕೇಳಿದನು (8:10). "ಯಾರೂ ವಿಧಿಸಲಿಲ್ಲ ಸ್ವಾಮೀ ಎಂದು ಆಕೆಯು ಉತ್ತರಿಸಿದಳು" (8:11ಎ). ನಂತರ ಕ್ರಿಸ್ತನು ಆಕೆಗೆ "ನಾನೂ ನಿನಗೆ ಶಿಕ್ಷೆ ವಿಧಿಸುವುದಿಲ್ಲ; ಹೋಗು ಇನ್ನು ಮೇಲೆ ಪಾಪಮಾಬೇಡ" ಎಂದು ಹೇಳಿದನು (8:11ಬಿ). ಧಾರ್ಮಿಕ ಮುಖಂಡರುಗಳು ತಪ್ಪುಮಾಡಿದವರನ್ನು ಅಗೌರವದಿಂದ ನಡೆಸಿಕೊಳ್ಳುತ್ತಿದ್ದರು. ಧರ್ಮಶಾಸ್ತ್ರವು ತಪ್ಪುಮಾಡಿದವರಿಗೆ ಮರಣದ ಶಿಕ್ಷೆಯನ್ನು ವಿಧಿಸುತ್ತಿತ್ತು. ಕರ್ತನು ಆ ಪಾಪಿಯನ್ನು ಗೌರವದಿಂದ ನಡೆಸಿಕೊಂಡನು. ಆತನು ಅವಳ ಪಾಪವನ್ನು ಉಪೇಕ್ಷೆ ಮಾಡಲಿಲ್ಲ (ಆತನು ಆಕೆ "ಇನ್ನು ಮೇಲೆ ಪಾಪಮಾಡಬೇಡ" ಎಂದು ಹೇಳಿದನು); ಆದರೆ ಆಕೆಗೆ ಕರುಣೆಯನ್ನು ತೋರಿದನು, ಮತ್ತು ಆಕೆಗೆ ಎರಡನೆಯ ಅವಕಾಶವನ್ನು ಕೊಟ್ಟನು. ನಮ್ಮೆಲ್ಲರಿಗೂ ಕರುಣೆಯ ಮತ್ತು ಎರಡನೆಯ ಅವಕಾಶದ ಅವಶ್ಯಕತೆಯು ಇದೆ. ಅದು ನಮಗೆ ಬೇಡವೇ?

## ಮುಕ್ತಾಯ

ಈ ಪಾಠವು ಜೀವಿತವನ್ನು ಬದಲಾಯಿಸುವ ತತ್ವಗಳಿಂದ ತುಂಬಿದೆ. ಅವುಗಳಲ್ಲಿ ನಾಲ್ಕವು ಪುನರಾವಲೋಕಿಸುವಾ:

- ಯೇಸು ದೇವರಲ್ಲವಾದರೆ, ಆತನು ಒಳ್ಳೆಯವನಲ್ಲ (ಯೋಹಾನ 7:12). ಕ್ರಿಸ್ತನು ದೇವರ ಮಗನು ಎಂದು ನಂಬಬೇಕೋ ಅಥವಾ ಬಿಡಬೇಕೋ ಎಂದು ಪ್ರತಿಯೊಬ್ಬ ಮನುಷ್ಯನು ನಿರ್ಧರಿಸಲೇಬೇಕು.
- ಯೇಸು ಪರಲೋಕದಲ್ಲಿನ ತನ್ನ ತಂದೆಯ ಹತ್ತಿರ ಮರಳಿದ್ದಾನೆ; ನಾವು ಆತನಲ್ಲಿ ನಂಬಿಕೆಯನ್ನು ಇಡದೆ ಹೋದರೆ, ಆತನಲ್ಲಿರುವ ನಾವು ಎಂದಿಗೂ ಹೋಗಲಾರೆವು (ಯೋಹಾನ 7:33, 34; 8:21, 24).
- ನಾವು ಯೇಸುವನ್ನು ನಂಬಿ ಆತನ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಂಡರೆ, ಆತನು ತನ್ನ ಆತ್ಮನನ್ನು ಕೊಡುತ್ತಾನೆ ಮತ್ತು ನಮ್ಮ ಜೀವಿತವನ್ನು ಆಶೀರ್ವದಿಸುತ್ತಾನೆ (ಯೋಹಾನ 7:37-39; ನೋಡಿ ಅಪೊಸ್ತಲರ ಕೃತ್ಯಗಳು 2:38).
- ಕ್ರೈಸ್ತರಾದ ನಾವು ನಮ್ಮ ಜೀವಿತವು ಸಮಸ್ಯೆಯಲ್ಲಿ ಸಿಕ್ಕಿದಾಗಲೂ ಕುಡಾ (ಯೋಹಾನ 8:11), ನಾವು ತಾಳ್ಮೆಯಿಂದ ಮತ್ತು ಪ್ರಾರ್ಥನೆಯಿಂದ ಆತನೆಡೆಗೆ ಮರಳಿದ್ದಾದರೆ ಆತನು ನಮಗೆ ಎರಡನೆಯ ಅವಕಾಶವನ್ನು ಕೊಡುವವನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9).

ನಿನ್ನ ಹಿಂದಿನ ಪಾಪಗಳಿಂದ ರಕ್ಷಿಸಲ್ಪಟ್ಟು ದೀಕ್ಷಾಸ್ನಾನ ಹೊಂದುವುದರ ಮೂಲಕ ಕ್ರಿಸ್ತನಲ್ಲಿಯ ನಿನ್ನ ನಂಬಿಕೆಯನ್ನು ನೀನು ಇನ್ನು ವ್ಯಕ್ತಪಡಿಸಿದೆ ಇದ್ದಿಯಾ (ಮಾರ್ಕ 16:15, 16), ಹಾಗಾದರೆ ಇದೇ ಸುಸಮಯ ಈಗಲೇ ಮಾಡು. ನೀನು ದೇವರ ಅವಿಶ್ವಾಸಿಯಾದ ಮಗುವಾಗಿದ್ದಾದರೆ ಇದೇ ಸುಸಮಯ ಈಗಲೇ ಆತನೆಡೆಗೆ ತಿರುಗಿಕೋ. ಗುಡಾರಗಳ ಹಬ್ಬದ ಸಂದರ್ಭದ ಆರಂಭದಲ್ಲಿ ಅನೇಕರು ಯೇಸುವಿನ ಬೋಧನೆಯನ್ನು ಕೇಳಿದವರು ರಕ್ಷಣೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ; ನಿನ್ನದನ್ನು ನೀನು ಕಳೆದುಕೊಳ್ಳಬೇಡ!

## ಮಾಹಿತಿ

ಈ ಪಾಠದ ಮನೆಯ ಅಭ್ಯಾಸಗಳು ಬೋಧನೆಯ ಸಾಧ್ಯತೆಗಳಿಂದ ತುಂಬಿವೆ. ಲೂಕ 9:57-62ರ ಮೇಲಿನ ಪ್ರಸಂಗವು ("ಬಾವಿ ಶಿಷ್ಯರು") ಈ ಪಾಠದಲ್ಲಿದೆ, ಮತ್ತು ಒಂದು ಯೋಹಾನ 7:37-39ರಲ್ಲಿದ್ದು ಇತರ ಸಾಧ್ಯತೆಗಳನ್ನು ಕಂಡುಕೊಳ್ಳುವಲ್ಲಿ ನೀವು ಸಂಶಯರಹಿತರು ಆಗಿರುತ್ತೀರಿ.

ಅನೇಕ ವೇದಭಾಗಿಯ ಪ್ರಸಂಗಗಳು ಯೋಹಾನ 7:46ರಲ್ಲಿನ: "ಈ ಮನುಷ್ಯನು ಮಾತನಾಡಿದಂತೆ ಯಾರೂ ಎಂದು ಮಾತನಾಡಿದ್ದಿಲ್ಲ" (KJV) ಎಂಬುದರ ಮೇಲೆ ಪ್ರಸಂಗಿಸಿದ್ದಾಗಿವೆ; ಪಾಪ ಕ್ರಿಸ್ತೀಯ ಜೀವಿತ, ಮದುವೆ, ರಕ್ಷಣೆ ಮತ್ತು ನರಕದಂತಹ ವಿಷಯದ ಮೇಲೆ ಯೇಸು ಮಾತನಾಡಿದಂತೆ ಯಾರೂ ಮಾತನಾಡಲಿಲ್ಲ.

---

ಟಿಪ್ಪಣಿಗಳು

[1]ಕ್ರಿಸ್ತನು ಕೊಡಲ್ಪಟ್ಟ ಒಂದು ಸಂಕ್ಷಿಪ್ತ ಬಾಹ್ಯರೇಷ್ಮೆಯು *ಕ್ರಿಸ್ತನ ಜೀವಿತ ಚರಿತ್ರೆ, 1ನೇ* ಪುಸ್ತಕದಲ್ಲಿ "ಸುವಾರ್ತೆಯ ವಿವರಣೆಯಲ್ಲಿ ಇರುವ ಸಂಗತಿಗಳು" ಎಂಬ ಚಾರ್ಟಿನಲ್ಲಿ ಸಿಕ್ಕುವುದಾಗಿದೆ. [2]"ಮೇಲಕ್ಕೇರು" ಎಂಬ ಪದವು ಆತನ ಮರಣ, ಹೂಣುವಿಕೆ ಮತ್ತು ಪುನರುತ್ಥಾನಕ್ಕಾಗಿ ಬಳಸಲ್ಪಟ್ಟಿದೆ; ಆತನ ಭೂಮಿಯ ಮೇಲಿನ ಕಾರ್ಯವನ್ನು ಸಂಪೂರ್ಣಗೊಳಿಸುವ ತನಕ ಯಾವ ಮೇಲಕ್ಕೇರುವಿಕೆಯು ಅಲ್ಲಿಲ್ಲ. [3]ಇದು ಸುಳಿಯಲ್ಲಿನ ಕೂಗನ್ನು ದೃಷ್ಟಾಂತಿಕರಿಸುವುದಾಗಿರಬಹುದು; ಅದು ಸುತ್ತಲೂ ಸುತ್ತಲೂ ತಿರುಗುತ್ತಿದ್ದರೂ ಕೂಡಾ, ಅದು ಹಳ್ಳದ ಮಧ್ಯದ ಹತ್ತಿರಕ್ಕೆ ಎಳೆಯುವುದಾಗಿದೆ. [4]The Living Bible. [5]KJVಯಲ್ಲಿ "ಸಹೋದರರನು ಇವುಗಳ *ವಿರುದ್ಧವಾಗಿ ಉಲ್ಲಂಘನೆಯನ್ನು* ಮಾಡಿದ್ದಾಗ್ಯೂ" (ಒತ್ತಿ ಹೇಳಿದ್ದು ನನ್ನದು) ಎಂದಿದೆ. ಕಡೆಯ ಪದವು ಉತ್ತಮವಾದ ಹಸ್ತಪ್ರತಿಯಲ್ಲಿ ಸಿಕ್ಕದಿದ್ದಾಗ್ಯೂ, ಈ ಭಾಗದ ಕೇಂದ್ರವನ್ನು ತಿಳಿಸುವುದಾಗಿದೆ. ಹೇಗೂ, ಆ ಪದವು ವಚನ 15ರಲ್ಲಿ ಸಿಕ್ಕುವುದಿಲ್ಲವಾದ್ದರಿಂದ, ಆ ಪರಿಚ್ಛೇದವು ವೈಯಕ್ತಿಕ ಉಪೇಕ್ಷೆಗಿಂತ ವಿಶಾಲವಾದ ಅನ್ವಯವನ್ನು ಹೊಂದಿದೆ ಎಂದು ಅರಿತುಕೊಳ್ಳಿರಿ. ಒಬ್ಬ ಸಹೋದರನು ತಪ್ಪಿನಲಿಲ ಸಿಲುಕಿದಾಗ ಆತನ ಆತ್ಮವು ಅವಮಾನವನ್ನು ಅನುಭವಿಸುತ್ತದೆ, ಆತನು ಪ್ರೀತಿಯಲ್ಲಿ ಸಾಗಲು ನಮ್ಮಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಗಳು ಆಗಿದ್ದೇವೆ. [6]ಪರ್ವತ ಪ್ರಸಂಗದಲ್ಲಿ ಯೇಸು ಒಬ್ಬ ಸಹೋದರನು ನಿನಗೆ ವಿರುದ್ಧವಾಗಿ ಏನಾದರೂ ಮಾಡಿದ್ದಾದರೆ; ನೀನು ಅವನೆಡೆಗೆ ಹೋಗು ಎಂದು ವಿವರಿಸಿದ್ದಾನೆ (ಮತ್ತಾಯ 5:23, 24). ನಿನ್ನ ಸಹೋದರನ ಬಗೆಗೆ ನಿನ್ನ ಮನಸ್ಸಿನಲ್ಲಿ ವಿರುದ್ಧವೇನಾದರೂ ಇರುವುದಾದರೆ ಎಂದು ಇಲ್ಲಿ ಆತನು ಚರ್ಚಿಸುತ್ತಿದ್ದಾನೆ. ಇಬ್ಬರೂ ವ್ಯಾಜ್ಯದಲ್ಲಿ ಇರುವುದಾದರೆ ಕ್ರೈಸ್ತರ ಹಾಗೆ ವರ್ತಿಸಿರಿ, ಅವರು ಇಬ್ಬರೂ ಹೋಗಿ … ಒಬ್ಬರನ್ನೊಬ್ಬರು ಎಲ್ಲೋ ಒಂದೆಡೆ ಮಧ್ಯದಲ್ಲಿ ಭೇಟಿಯಾಗುವರು. ಹೇಗೂ, ಒಬ್ಬ ವ್ಯಕ್ತಿಯು ತಾನೇನು ಮಾಡಬೇಕಾಗಿತ್ತು ಅದನ್ನು ಮಾಡದೇ ಹೋದರೆ, ಅದು ಇನ್ನೊಬ್ಬನಿಗೆ ನೆಪವಾ ಗಲಾರದು. ನೀನು ಅವಮಾನಿತನು ಅಥವಾ ಅಪರಾಧಿಯೂ ಆಗಿದ್ದಾದರೆ, ನೀನು ಇನ್ನೊಬ್ಬ ವ್ಯಕ್ತಿಯ ಹತ್ತಿರ ಹೋಗು ಮತ್ತು ಅದು ಸಾಗುವಂತೆ ಮಾಡು. [7]Gayle Oler ಅವರು Boles Children's Home in Quinlan, Texas, ದಲ್ಲಿ ಅನೇಕ ವರ್ಷಗಳವರೆಗೆ ಮೇಲ್ವಿಚಾರಕರಾಗಿದ್ದರು. Eastside church of Christ in Midwest City, Oklahoma ಈ ಹೇಳಿಕೆಯನ್ನು ಅನೇಕ ವರ್ಷಗಳ ಹಿಂದಿನಲ್ಲಿ ಮಾಡುವುದನ್ನು ಕೇಳಿದ್ದನು. [8]ಮುಂದಿನ ವಚನವು ಅವರು ಕೇವಲ ಕೇಳುವುದಕ್ಕೆ ಹೋಗಿರಲಿಲ್ಲ ಎಂದು ಸೂಚಿಸುವುದಾಗದೆ. ವಚನ 17, "ಆತನು ಕೇಳದೆ ಹೋದರೆ" ಎಂದು ಹೇಳುವುದಾಗಿದ್ದು ಇದು ಮನಸ್ತಾಪಹೊಂದಿದ ಇಬ್ಬರ ಮಧ್ಯದ ಸಂಗತಿಗಳನ್ನು ಸರಿದೂಗಿಸುವುದನ್ನು ಪ್ರಯತ್ನಿಸುವುದರ ಬಗೆಗೆ ಮಾತನಾಡುವುದನ್ನು ಸೂಚಿಸುವುದಾಗಿದೆ. [9]ಸಭೆ ಎಂಬ ಪದವು ಸುವಾರ್ತೆಯ ವಿವರಣೆಯ ಎರಡು ಪರಿಚ್ಛೇದದಲ್ಲಿ ಸಿಕ್ಕುವುದಾಗಿದೆ: ಮತ್ತಾಯ 16 ಮತ್ತು 18. ಪದದ ಮೊದಲ ಬಳಕೆಯು ಸಾರ್ವತ್ರಿಕ ಸಭೆಯನ್ನು ಸೂಚಿಸುವುದಾಗಿದೆ. ಎರಡನೆಯ ಸ್ಥಳೀಯ ಸಭೆಯನ್ನು ಸೂಚಿಸುವುದಾಗಿದೆ. [10]ಸಭೆಯಲ್ಲಿ ಸಭಾಹಿರಿಯರು ಇರುವುದಾದರೆ, ಸಭೆಯ ಆತ್ಮೀಕ ಪ್ರಯೋಜನಕ್ಕಾಗಿ ಇರುವ ಸಂಗತಿಗಳಿಗಾಗಿ ಅವರು ಮುಂದಾಳತ್ವ ವಹಿಸಬೇಕು.

[11]ಮತ್ತಾಯ 18:15-17 ಸಭೆಯ ಶಿಸ್ತಿನ ಬಗೆಗಿನ ಪ್ರಶ್ನೆಯನ್ನು ಹುಟ್ಟಿಸುವುದಾಗಿದೆ. ಸಮಯವಿರುವುದಾದರೆ, ಈ ವಿಷಯದ ಮೇಲೆ ಇನ್ನೊಂದು ಪರಿಚ್ಛೇದವನ್ನು 1 ಕೊರಿಂಥ 5 (ನೋ

ಡಿರಿ 2 ಕೊರಿಂಥ 2:4-11); 2 ಥೆಸಲೋನಿಕ 3:6, 14, 15; 1 ತಿಮೋಥೆ 5:20 ಮತ್ತು ರೋಮಾಪುರ 16:17 ರಂಥವುಗಳನ್ನು ತೆಗೆದುಕೊಳ್ಳಿರಿ. [12]ವಚನ 19ರಲ್ಲಿ ವಾಗ್ದಾನವು ಮತ್ತಾಯ 16:19 ಕೊನೆಯ ಭಾಗದಲ್ಲಿ ಪೇತ್ರ ಮೊದಲನೇ ವಾಗ್ದಾನಕ್ಕೆ ಸಮಾನವಾದದ್ದು ಆಗಿದೆ. ಮತ್ತಾಯ 18:19ರಲ್ಲಿ ಕ್ರಿಸ್ತನು ನೇರವಾಗಿ ಅಪೊಸ್ತಲರೊಡನೆ ಮಾತನಾಡುತ್ತಿದ್ದರಿಂದಾಗಿ, ಅನೇಕ ವಿಶ್ಲೇಷಕರರು ಈ ವಾಗ್ದಾನವು ಮೂಲತಹವಾಗಿ ಅವರಿಗೆ ಆಗಿತ್ತು ಎಂದು ಪರಿಗಣಿಸುವವರಾಗಿದ್ದಾರೆ. ಅಲ್ಲಿನ ಸಂದರ್ಭವು ಸಭೆಯ ಶಿಸ್ತಿನದಾದ್ದರಿಂದ, ಹೇಗೋ, ಸಾಮಾನ್ಯ ಅನ್ವಯವು ಸಭೆಯ ಸದಸ್ಯರಿಗಾಗಿ ಮಾಡಲ್ಪಡುವುದಾಗಿದೆ. ಸಭೆಯು ಪರಲೋಕವನ್ನು "ಅವಶ್ಯವಾದುದ್ದು" ಎಂಬಂತೆ "ನಿರ್ಭಂಧಿಸುವುದಾಗಿದೆ" (ಅದು, ಪರಲೋಕಕ್ಕೆ ಮಾತ್ರ ಸೀಮಿತವಾದ್ದು ಆಗಿದೆ), ನಂತರ ಅವರ ಕಾರ್ಯವು ದೇವರನ್ನು ಸಂತುಷ್ಟಗೊಳಿಸುವದು ಆಗಿದೆ. ಇಬ್ಬರು ಕ್ರೈಸ್ತರು ತಮಗೇನು ಬೇಕಾದುದಕ್ಕೋಸ್ಕರ ಕೇಳುವ ಮತ್ತು ದೇವರು ಅವರಿಗೆ ಅದನ್ನು ಕೊಡುವಂಥ (1 ಯೋಹಾನ 5:14) ಅಯೋಗ್ಯವಾದ ವಾಗ್ದಾನಗಳಿಗಾಗಿ 18:19ರಿಂದ ನಾವು ತೆಗೆದುಕೊಳ್ಳಬಾರದು. [13]ಯೇಸುವಿನ ಬೋಧನೆಯ ಸಮಯದಲ್ಲಿ ತೀವ್ರವಾದದ ಆರಂಭದಲ್ಲಿ ದೊಡ್ಡಬಾರದ ವಿಷಯದಲ್ಲಿ ಪೇತ್ರನು ಕೇಳಿದಂಥ ಪ್ರಶ್ನೆಯು ಅಚ್ಚರಿಯನ್ನು ಉಂಟುಮಾಡುವದು ವಾಸ್ತವವಾಗಿದೆ. [14]ಮತ್ತಾಯ 18:21-35ರ ವಿವರವಾದ ಅಧ್ಯಯನಕ್ಕಾಗಿ, "ಏಳೆಪ್ಪತ್ತು ಸಾರಿ" ಈ ಪುಸ್ತಕದಲ್ಲಿನ *ಒಡೆಯನನ್ನು ಭೇಟಿಯಾಗು* ಎಂಬುದರಲ್ಲಿ ಸಿಕ್ಕುವುದಾಗಿದೆ. [15]*ಕ್ರಿಸ್ತನ ಜೀವನ ಚರಿತ್ರೆ, 1ನೇ ಪುಸ್ತಕದಲ್ಲಿನ* "ಕ್ರಿಸ್ತನ ಬರೋಣ" ಮತ್ತು *ಕ್ರಿಸ್ತನ ಜೀವಿನ ಚರಿತ್ರೆ, 2ನೇ* ಪುಸ್ತಕದಲ್ಲಿ "ಉತ್ತರದಿಂದ ಗಲಿಲಾಯಕ್ಕೆ" ಎಂಬ ಪಾಠಗಳನ್ನು ನೋಡಿರಿ. [16]ಯೋಹಾನನು ನಿರ್ಧಿಷ್ಟವಾಗಿ ಶ್ರೇಷ್ಟ ಗಲಿಲಾಯದ ಸೇವೆಯ ನಂತರದ ಭಾಗವನ್ನು ಸೂಚಿಸುವವನಾಗಿದ್ದಾನೆ, ಆದರೆ ಆತನ ಪದಗಳು ಆ ಎಲ್ಲಾ ಸೇವೆಯನ್ನು ಸಂಕ್ಷಿಪ್ತಿಕರಿಸುವವುಗಳು ಆಗಿವೆ. [17]NASBಯಲ್ಲಿ "ಗುಡಾರಗಳ ಹಬ್ಬ" ಎಂದು ಬಳಸಲ್ಪಟ್ಟಿದ್ದು ಸ್ವೀಕೃತವಾದ ಭಾಷಾಂತರವಾ ಗಿದೆ. ಆದರೆ ನಾನು ಬಲು ಚಿರಪರಿಚಿತವಾದ "ಪರ್ಣಶಾಲೆಯ ಹಬ್ಬ"ವನ್ನು ಬಳಸುವವನಾಗಿದ್ದೇನೆ. [18]*ಕ್ರಿಸ್ತನ ಜೀವಿತ, 1ನೇ* ಪಸ್ತಕದಲ್ಲಿ ಸಿಕ್ಕುವ "ಯೆಹೂದ್ಯರ ಹಬ್ಬಗಳು" ಎಂಬ ಚಾರ್ಟನ್ನು ನೋಡಿರಿ. [19]ಈ ಹಬ್ಬಕ್ಕಾಗಿ ಜೊತೆಯಾದ ಮಾಹಿತಿಗಾಗಿ, ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ಭಾವಿ ಶಿಷ್ಯರು" ಎಂಬ ಪಾಠವನ್ನು ನೋಡಿರಿ. [20]ಇವರು ಯೇಸುವಿನ ತಮ್ಮಂದಿರು ಆಗಿದ್ದರು ಮತ್ತು ಅವರೆಲ್ಲ ತಾಯಿ ಅವಳೊಬ್ಬಳೇ ಆಗಿದ್ದಳು (ಮರಿಯಳು), ಆದರೆ ತಂದೆ ಒಬ್ಬನೇ ಆಗಿರಲಿಲ್ಲ (ಯೇಸುವಿನ ತಂದೆಯು ದೇವರು; ಇತರರ ತಂದೆ ಯೋಸೇಫ). ಅವರ ಹೆಸರು ಯಾಕೋಬ, ಯೊಸೆಫ ಸಿಮೋನ ಮತ್ತು ಯೂದ (ಮತ್ತಾಯ 13:55; ಮಾರ್ಕ 6:3).

[21]ಅವರು ನಂತರದಲ್ಲಿ ಆತನನ್ನು ನಂಬಿದರು (ಅಪೊಸ್ತಲರ ಕೃತ್ಯಗಳು 1:4; ನೋಡಿರಿ 1 ಕೊರಿಂಥ 15:7); ಆದರೆ ಈ ವಿಷಯದಲ್ಲಿ, ಅವರು ನಂಬಿರಲಿಲ್ಲ. [22]ಯೇಸು ಸುಳ್ಳಾಡಲಿಲ್ಲ (ನೋಡಿರಿ ಯೋಹಾನ 7:18). ಆತನು ಸತ್ಯದ ಸಾಕಾರನಾಗಿದ್ದನು (ಯಹಾನ 14:6). [23]ಗುಡಾರ ಹಬ್ಬಕ್ಕೆ ಸಂಬಂಧಿಸಿದಂತೆ ಹುಟ್ಟು ಕುರುಡನನ್ನು ಸ್ವಸ್ಥಮಾಡಿದ ಒಂದೇ ಒಂದು ಅದ್ಭುತ ಕಾರ್ಯವು ದಾಖಲಿಸಲ್ಪಟ್ಟಿದೆ (ಯೋಹಾನ 9:1-41). [24]"ಸಮಯ" ಎಂದು ಅದನ್ನು ಅನೇಕ ಗ್ರೀಕ್ ಪದಗಳು ಭಾಷಾಂತರಿಸಿವೆ: ಒಂದು ಯೋಹಾನ 7:6ರಲ್ಲಿ ಬಳಸಲ್ಪಟ್ಟಿದ್ದು "ಸರಿಯಾದ ಸಮಯ" ಎಂದು ಅರ್ಥಕೊಡುತ್ತದೆ. NIV ನೋಡಿರಿ. [25]KJVಮತ್ತು ಅನೇಕ ಇತರ ಭಾಷಾಂತರಗಳಲ್ಲಿ "ಇನ್ನೂ" ಎಂಬ ಪದವನ್ನು ಒಳಗೊಂಡಿರುವುದಾಗಿದೆ. [26]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 315. [27]ಸಮಾರ್ಯದ ಮೂಲಕ ಪ್ರಯಾಣಿಸುವ ವಿಶ್ಲೇಷಣೆಗಾಗಿ, *ಕ್ರಿಸ್ತನ ಜೀವಿನ ಚರಿತ್ರೆ 2ನೇ* ಪುಸ್ತಕದಲ್ಲಿ ಸಿಕ್ಕುವ "ಉತ್ತರದಿಂದ ಗಲಿಲಾಯಕ್ಕೆ" ಎಂಬ ಪಾಠವನ್ನು ನೋಡಿರಿ. [28]KJVಯ "ದೇವಕುಮಾರನು ಮನುಷ್ಯರನ್ನು ನಾಶಮಾಡಲು ಬರಲಿಲ್ಲ, ಆದರೆ ರಕ್ಷಿಸುವುದಕ್ಕೆ ಬಂದಿದ್ದಾನೆ" ಎಂಬ ಯೇಸುವಿನ ಗದರಿಕೆಯ ಸಂಕ್ಷಿಪ್ತ ವಿವರಗಳನ್ನು ಒಳಗೊಂಡಿದೆ. NASBಯಲ್ಲಿ ಬ್ರಾಕೆಟ್‌ನಲ್ಲಿ ಸಿಕ್ಕುವ ಆ ಮಾತುಗಳು ಈ ಪದಗಳು ಉತ್ತಮವಾದ ಪುರಾತನ ಹಸ್ತಪ್ರತಿಗಳಲ್ಲಿ ಕಂಡುಬರುದಿಲ್ಲ. [30]ಮತ್ತಾಯ 8:19-22ರೊಡನೆ ಹೋಲಿಸಿರಿ. ಲೂಕ 9:57-62ರ ವಿವರವಾದ ಅಧ್ಯಯನಕ್ಕಾಗಿ ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ಭಾವಿ ಶಿಷ್ಯರು" ಎಂಬ ಪಾಠವನ್ನು ನೋಡರಿ.

[31]ಆತನು ತನಗಾಗಿ ಅವಶ್ಯವಿಲ್ಲದ ಈ ಭಾವಿ ಶಿಷ್ಯರ ಬಗೆಗೆ ಯೇಸು ಏನೂ ಹೇಳಿಲ್ಲ. ಆತನು "ನೇಗಿನ ಮೇಲೆ ಕೈ ಹಾಕಿದನು" ಮತ್ತು ಹಿಂತಿರುಗಿ ನೋಡಲಿಲ್ಲ (ಲೂಕ 9:62). [32]ಯೆರೂಸಲೇಮಿನಲ್ಲಿ ಹೆಚ್ಚಾಗಿ ಆ ಸಮಯದಲ್ಲಿನ ಪ್ರತಿಯೊಬ್ಬರು ಯೆಹೂದ್ಯರೇ ಇದ್ದರು ಎಂಬುದು ವಿಚಿತ್ರವೆನಿಸುತ್ತದೆ, ಆದರೆ ವಚನ 13 ಗಮನಿಸಿರಿ. ಯೆಹೂದ್ಯರು "ಯೆಹೂದ್ಯರ" ಭಯದಿಂದ ಮಾತನಾಡಲಿಲ್ಲ. [33]ಮಹಾಯಾಜಕರು ಯಾವಾಗಲೂ ಸದ್ದುಕಾಯರು ಆಗಿರುತ್ತಿದ್ದರು. [34]ಆತನು ಗಲಿಲಾಯದಲ್ಲಿ

ಮಾಡಿದ ಅದ್ಭುತ ಕಾರ್ಯವನ್ನು ಬಹುಶ ಜನರು ನೋಡಿರಬಹುದು. ಆತನ ಹಿಂದಿನ ಯೆರೂಸಲೇಮಿನ ಪ್ರಯಾಣದಲ್ಲಿ ಕೊಳದ ಬಳಿ ಕುಂಟನನ್ನು ಆತನು ವಾಸಿಮಾಡಿದ ಆತನ ಬಗೆಗೆ ಎದ್ದ ವಿವಾದವನ್ನು ಸಹ ಅವರು ಮರೆತಿರಲಿಲ್ಲ (ಯೋಹಾನ 7:21-23; ನೋಡಿರಿ ಯೋಹಾನ 5). [35]ಯೇಸು ಕುಂಟನನ್ನು ವಾಸಿಮಾಡಿದಾಗ ಹಿಂದೆ ದಾಖಲಿತವಾದ ಸಮಯದಂತೆ ಅದ ಹಬ್ಬದ ಆರಂಭವಾಗಿತ್ತು (ಯೋಹಾನ 5:1) ಪಸ್ಕ ಹಬ್ಬದ 1½ ವರ್ಷದ ಮುಂಚೆಯೂ ಆಗಿರಬಹುದು. [36]ವೇದ ಭಾಗವು ಯೇಸು ಮುಂಚೆಯೇ ಯೆರೂಸಲೇಮಿಗೆ ಬಂದನೋ ಇಲ್ಲವೂ ಎಂದು ಹೇಳುವುದಿಲ್ಲ. ಆತನು ದೇವಾಲಯಕ್ಕೆ ಹೋದಾಗ ಆಗ ತಾನೇ ಆನು ತಲುಪಿದ್ದನು ಎಂದು ತಿಳಿಯುವದು ಯೋಗ್ಯವೆಂದು ಕಾಣಿಸುತ್ತದೆ. [37]ಆತನು ಸೊಲೋಮೋನ ಮಂಟಪಕ್ಕೆ ಹೋಗಿರಬಹುದು (ನೋಡಿರಿ ಯೋಹಾನ 10:23; ಅಪೊಸ್ತಲರ ಕೃತ್ಯಗಳು 3:11). ಯೋಹಾನ 7:14; ಮಲಾಕಿ 3:1ರಲ್ಲಿ ಪರಿಪೂರ್ಣವಾಗಿದೆ ಎಂದು ಕೆಲವರು ನಂಬುತ್ತಾರೆ. [38]ಯೇಸುವಿನ ಬೋಧನೆಯು ಯಾವಾಗಲೂ ಜನರನ್ನು ಅಚ್ಚರಿಗೊಳಿಸುವುದಾಗಿದೆ (ನೋಡಿರಿ ಮತ್ತಾಯ 7:28, 29; 22:33; ಮಾರ್ಕ 1:22; ಯೋಹಾನ 7:46). [39]ನಜರೇತಿನ ಜನರು ಯೇಸುವಿಗೆ ಪ್ರತಿಕ್ರಯಿಸಿದ್ದನ್ನು ಗಮನಿಸಿ (ಮತ್ತಾಯ 13:54). [40]ಯೆಹೂದಿ ಗಂಡು ಶಿಶುವು ಎಂಟನೆಯ ದಿನದಲ್ಲಿ ಸುನ್ನತಿಗೆ ಒಳಗಾಗುತ್ತಿತ್ತು (ಯಾಡಕಕಾಂಡ 12:3), ಆ ಎಂಟನೆಯ ದಿನವೂ ಕೂಡಾ ಸಬ್ಬತ್ತ್ ದಿನದಲ್ಲಿ ಬರುತ್ತಿತ್ತು.

[41]"ನನ್ನನ್ನು ಬಲ್ಲಿರಿ ನಾನು ಎಲ್ಲಿಯವನೆಂದು ಬಲ್ಲಿರಿ" ಎಂಬ ಯೇಸುವಿನ ಮಾತಿನಲ್ಲಿ ವ್ಯಂಗ್ಯವನ್ನು ಬಳಸಿದ್ದಾಗಿದೆ (ಯೋಹಾನ 7:28). [42]"ಗ್ರೀಕರೊಳಗೆ ಚದುರಿಕೊಂಡಿರುವ ... ಆ ಗ್ರೀಕರಿಗೆ ಉಪದೇಶ ಮಾಡಬೇಕೆನ್ನುತ್ತಾನೋ?" ಎಂದು ವಚನ 35 ಹೇಳುತ್ತದೆ. (ಚದುರಿದ) ಇದು ಗ್ರೀಕ ಪದವಾಗಿದ್ದು ನಲ್ಲಿ ಬಳಸಲ್ಪಟ್ಟಿದ್ದು ಅನ್ಯರಲ್ಲಿ ಚದುರಿಹೋದ ಗ್ರೀಕರನ್ನು ಸೂಚಿಸುವುದಾಗಿದೆ. [43]ಮೂಲವೇದಭಾಗದಲ್ಲಿ "ಉದರ" ಎಂದಿದೆ (ನೋಡಿKJV) ಆದರೆ ಇದು "ಒಳಗೆ ಇರುವ" ಎಂಬ ವಿಚಾರವನ್ನು ತಿಳಿಸುವುದಾಗಿದೆ. [44]ವಚನ 37ರಿಂದ 39ರವರೆಗಿನ ವಿವರವಾದ ಅಧ್ಯಯನಕ್ಕೆ ಈ ಪುಸ್ತಕದ ನಂತರದಲ್ಲಿ ಸಿಕ್ಕುವ "ಜೀವಕರವಾದ ನೀರು" ಎಂಬುದನ್ನು ನೋಡಿರಿ. [45]ಜನರ ಗುಂಪಿಗೆ ಧರ್ಮಶಾಸ್ತ್ರವು ತಿಳಿದಿಲ್ಲ ಎಂದು ಅವರು ಹೇಳಿದರು. ಗುಂಪಿನಲ್ಲಿ "ಅತಿಪಾಪಮಾಡಿದವರೂ" ಇದ್ದಾರೆ ಎಂದು ಸಹ ಅವರು ಹೇಳಿದರು. ದೇವರಿಗೆ ಅವಿದೇಯರಾದವರು ಶಾಪಗ್ರಸ್ತರು ಎಂದು ಧರ್ಮಶಾಸ್ತ್ರವು ಹೇಳುತ್ತದೆ (ಧರ್ಮೋಪದೇಶಕಾಂಡ 27:26). ಅಧಿಕಾರಿಗಳು, ಯಾರು ವಿಶ್ವಾಸಿಗಳಲ್ಲ, ಆದರೆ ಯಾರು ಅವಿಧೇಯರು ಎಂದು ಪ್ರತಿಷ್ಠೆಯಿಂದ ಬಲು ಕರುಡತೆಯಿಂದ ನೋಡುವವರಾಗಿದ್ದರು. [46]ಒಬ್ಬನಾದರೂ ಪ್ರವಾದಿಯು ಗಲಿಲಾಯದಿಂದ ಬರುತ್ತಾನೆ: ಯೋನ (2 ಅರಸು 14:25). ಫರಿಸಾಯರು ಹಳೆಯ ಒಡಂಬಡಕೆಯತ್ತ ತನ್ನ ಅಲಕ್ಷತೆಯನ್ನೂ ಮತ್ತು ಯೇಸುವಿನ ಮೂಲದ ಬಗೆಗೆ ತಮ್ಮ ಅಲಕ್ಷತೆ ಎರಡನ್ನೂ ತೋರಿಸಿಕೊಂಡರು. ನಂತರದಲ್ಲಿ ಯೋಹಾನ 9:29ರಲ್ಲಿ, ಅವರು ನಿಜವಾಗಿಯೂ ಆತನು ಎಲ್ಲಿಂದ ಬಂದವನು ಎಂಬುದರ ಬಗೆಗೆ ತಮಗೆ ಯಾವ ಸಂಗತಿಯೂ ತಿಳಿದಿಲ್ಲ ಎಂದು ಒಪ್ಪಿಕೊಂಡರು. [47]ನಿಕೋದೇಮನು ತನ್ನ ನಂಬಿಕೆಯನ್ನು ವ್ಯಕ್ತಪಡಿಸಲಿಲ್ಲ, ಆದರೆ ಕೊನೇಪಕ್ಷ ಕರ್ತನೊಡನೆ ಸಾರ್ವಜನಿಕವಾಗಿ ಮಾತನಾಡಿದನು. ಯೋಹಾನ 3ರಲ್ಲಿನ ಆತನ ಪ್ರತಿಕ್ರಿಯೆಯಿಂದ ಆತನ ನಂಬಿಕೆಯಲ್ಲಿ ಪ್ರಗತಿಯನ್ನು ಮಾಡಿದನು. [48]ಅದೇ ಸಮಯದಲ್ಲಿ, ಆತನು ದೇವರ ಅನುಗ್ರಹದಿಂದ ರಕ್ಷಿಸಲ್ಪಟ್ಟಿದ್ದನು. ಆ ಸಂದರ್ಭದಲ್ಲಿ, ಗುಂಪಿನಲ್ಲಿಯ ಕೆಲವರು ಆತನನ್ನು ನಂಬಿಲ್ಲ ಎಂಬ ಅಂಶದೊಡನೆ ಯೇಸುವಿನ ವೈರಿಗಳು ಅಡೆತಡೆಮಾಡುತ್ತಿದ್ದರು. [49]ಎಣ್ಣೆಮರಗಳ ಗುಡ್ಡವು ಕಿದ್ರೋನ್ ಹಳ್ಳವನ್ನು ದಾಟಿ ಪಟ್ಟಣದ ಪೂರ್ವದಲ್ಲಿದೆ. [50]ಆತನು ಏನನ್ನು ಬರೆದು ಎಂದು ವೇದಭಾಗವು ಹೇಳುವುದಿಲ್ಲ, ಮತ್ತು ಊಹೆಯು ವ್ಯರ್ಥವಾದದ್ದು ಆಗಿದೆ.